ಜನಪ್ರಿಯ ಗ್ರಂಥಮಾಲೆ

೪೧೧

ಪ್ರಾದೇಶಿಕ ಯೋಜನಾ ಶಾಸ್ತ್ರ

ಡಾ. ಎಮ್. ಎಸ್. ಹುಲ್ಲೋಳಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜೂನ, ೧೯೬೧

ಉಪನ್ಯಾಸ ಗ್ರಂಥಮಾಲೆ

೪೧೧

ಪ್ರಾದೇಶಿಕ ಯೋಜನಾ ಶಾಸ್ತ್ರ

ಡಾ. ಎಮ್. ಎಸ್. ಹುಲ್ಲೋಳಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜೂನ, ೧೯೯೧

ಪ್ರಕಾಶಕರು

ಪ್ರೊ. ಸದಾನಂದ ಕನವಳ್ಳಿ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಜೂನ, ೧೯೬೧

ಬೆಲೆ : ರೂ. ೧-೦೦

ಮುದ್ರಕರು :

ಜಿ. ಬಿ. ಮನ್ವಾಚಾರ
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಗೆಯು ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವುದರ
ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಅ
ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದ
ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹ
ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವ
ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನ ಮ
ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೧೦ ಪುಸ್ತಿಕೆಗಳು ಪ್ರ
ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರ
ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆ
ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲ
ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತ
ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ
ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿ
ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ರಾಮೇಗೌಡ
ಕುಲಪತಿಗಳು

ಅರಿಕೆ

ಬೆಳಗಾಂವ ಜಿಲ್ಲೆಯ, ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿಯಲ್ಲಿ ಜರುಗಿದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಮಾಲೆಯ ಶಿಬಿರದಲ್ಲಿ 'ಪ್ರಾದೇಶಿಕ ಯೋಜನಾ ಶಾಸ್ತ್ರ, ಎನ್ನುವ ವಿಷಯದ ಮೇಲೆ ಮಾಡಿದ ಉಪನ್ಯಾಸದ ವಿಸ್ತೃತ ರೂಪವೇ ಈ ಚಿಕ್ಕ ಪುಸ್ತಿಕೆ.

ಇಂದು ಕನ್ನಡದ ಬಗ್ಗೆ ಎಲ್ಲಡೆ ಕೂಗು ಕೇಳಿ ಬರುತ್ತಿದೆ. ನಾನು ರೂಪಿಸಿಕೊಂಡ ಮನೋಧರ್ಮವು ಇಂತಿದೆ.

೧ ಕನ್ನಡದಲ್ಲಿ ಅನೇಕ ಶಾಸ್ತ್ರೀಯ ವಿಷಯಗಳ ಬಗ್ಗೆ ವೈಜ್ಞಾನಿಕ ದೃಷ್ಟಿಕೋನಗಳಿಂದ, ಪಂಡಿತ—ಪಾಮರ ಇಬ್ಬರಿಗೂ ಮೆಚ್ಚುಗೆಯಾಗುವಂತೆ, ಗ್ರಂಥಗಳನ್ನು ಹೊರತರಬೇಕು. ವಿಜ್ಞಾನ, ತಂತ್ರಜ್ಞಾನ, ಶಾಸ್ತ್ರೀಯ ವಿಷಯಗಳಿಗೆ ಆದ್ಯತೆ ಸಿಗಬೇಕು.

೨ ಅನೇಕ ಪರಿಣತರು ತಮ್ಮ ತಮ್ಮ ಮೆಚ್ಚುಗೆಯ ವಿಷಯಗಳ ಬಗ್ಗೆ ಕನ್ನಡದಲ್ಲಿ ಬರೆಯಲು ಪ್ರಯತ್ನಿಸಿ ತಮ್ಮ ಪಾಲಿನ ಕರ್ತವ್ಯವನ್ನು ಪೂರೈಸಬೇಕು.

ಈ ದೃಷ್ಟಿಯಿಂದ ನಾನು ಮಾಡಿದ ಪ್ರಾಮಾಣಿಕ ಪ್ರಯತ್ನದ ಫಲವೇ 'ಪ್ರಾದೇಶಿಕ ಯೋಜನಾ ಶಾಸ್ತ್ರ' ಪುಸ್ತಿಕೆ.

ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಪ್ರಾದೇಶಿಕ ಯೋಜನೆ ಸಮಗ್ರ ಅಭಿವೃದ್ಧಿಗಾಗಿ ಅವಶ್ಯಕವಾಗಿದೆ. ಈ ಶಾಸ್ತ್ರದ ಬಗ್ಗೆ ಭಾವಿಯೋಜನಾಕಾರರಾಗಲಿರುವ ನಮ್ಮ ಕನ್ನಡ ಮಕ್ಕಳಿಗೂ ಹಾಗೂ ಜನಸಾಮಾನ್ಯರಿಗೂ ಈ ಶಾಸ್ತ್ರದ ಸ್ಥೂಲ ಕಲ್ಪನೆ ಮಾಡಿಕೊಡುವದು ನನ್ನ ಧ್ಯೇಯ.

ಗ್ರಾಮೀಣ ಪ್ರದೇಶದಿಂದ ಮುಂದೆ ಬಂದ ಜನರಲ್ಲಿ ಸಾಮಾನ್ಯವಾಗಿ ಮೂರು ಲಕ್ಷಣಗಳನ್ನು ಕಾಣುತ್ತೇವೆ.

೧ ತಮ್ಮ ಊರಿನ ಬಗ್ಗೆ ಅಪಾರ ಅಭಿಮಾನ
೨ ತಮ್ಮಊರಿನ ಅಧಿದೇವತೆಯಲ್ಲಿ ಅಪಾರ ಭಕ್ತಿ
೩ ಕಷ್ಟಸಹಿಷ್ಣುತೆ ಮತ್ತು ಹೋರಾಟದಿಂದ ಮುಂದೆ ಬರಬೇಕೆಂಬ ಛಲವನ್ನು ಕಾಣುತ್ತೇವೆ.

ನಮ್ಮ ಊರು ಬೆಳಗಾಂವ ಜಿಲ್ಲೆಯ, ಹುಕ್ಕೇರಿ ತಾಲೂಕಿನ ಶಿರಗಾಂವ (ರಕ್ಷಿ) ಇದ್ದು, ನಮ್ಮ ಊರಿನ ವೈಶಿಷ್ಟ್ಯಗಳೆಂದರೆ, ಸುಮಾರು ೨೦೦೦ ಜನಸಂಖ್ಯೆಯುಳ್ಳ ಒಂದು ಆದರ್ಶ ಗ್ರಾಮ ವಾಗಿದೆ. ಶೈಕ್ಷಣಿಕ ಹಾಗು ಸಾಂಸ್ಕೃತಿಕ ಸ್ವರೂಪ ಎದ್ದು ಕಾಣುವಂತಹದು. ಇಲ್ಲಿ ಪ್ರತಿಶತ ೬೦ ರಷ್ಟು ಸಾಕ್ಷರತೆ ಹಾಗೂ ೨೫೦ ಜನ ಶಿಕ್ಷಕರು ಹಾಗು ನೌಕರರು ನಮ್ಮೂರಿನವರು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರನ್ನು ರೂಪಿಸಿದ ರೂವಾರಿ 'ಪರಪ್ಪ ಮಾಸ್ತರ'ರೆಂದು ಪ್ರಖ್ಯಾತರಾದ ನಮ್ಮ ದೊಡ್ಡಪ್ಪನವರು. (ಪರಪ್ಪ ಬಸಪ್ಪ ಹುಲ್ಲೋಳಿ). ಶಿಕ್ಷಣದ ಬಗ್ಗೆ ಒಂದು ಆದರ್ಶ ರೂಪಿಸಿಕೊಳ್ಳಲು ನನಗೆ

ಪ್ರೇರಕರಾದ ನಮ್ಮ ದೊಡ್ಡಪ್ಪನವರನ್ನು ಹಾಗೂ ನಮ್ಮ ಮಾವಂದಿರಾದ ಪ್ರೊ. ಎಮ್.ಆರ್. ಸಾಖರೆ, ಕೆ.ಎಲ್.ಇ. ಸಂಸ್ಥೆಯ ಸಂಸ್ಥಾಪಕರನ್ನು ಸ್ಮರಿಸುವದು ನನ್ನ ಕರ್ತವ್ಯ. ನಮ್ಮೂರಲ್ಲಿ ಇಂದಿಗೂ ಶ್ರೀ ಸಿದ್ಧಾರೂಢ ಆಧ್ಯಾತ್ಮ ಜ್ಞಾನ-ಮಂದಿರ ತನ್ನ ಪ್ರವಚನಗಳಿಂದ ಆಧ್ಯಾತ್ಮಿಕ ಪರಿಸರವನ್ನು ನಿರ್ಮಿಸುತ್ತಿದೆ. ನಮ್ಮ ಊರಿನಲ್ಲಿ ಗ್ರಾಮಪಂಚಾಯತ ಮಂಡಲಿ, ಪ್ರಾಥಮಿಕ ಮಾದರಿಯ ಶಾಲೆ, ಮಾಧ್ಯಮಿಕ ಶಾಲೆ, ಶ್ರೀ ಬಸವೇಶ್ವರ ಯುವಕ ಮಂಡಳ, ಎರಡು ಗ್ರಾಮ ಸೇವಾ ಸಹಕಾರಿ ಸಂಘಗಳು ವಿವಿಧ, ಚಟುವಟಿಕೆಗಳನ್ನು ನಡೆಸುವಲ್ಲಿ ಕಾರ್ಯ ಪ್ರವೃತ್ತವಾಗಿವೆ.

ನಮ್ಮ ಊರಲ್ಲಿ ಮಾತೋಶ್ರೀ ರೇಣುಕಾ ದೇವಿಯೇ ಅಧಿದೇವತೆ. ಈ ಪುಸ್ತಿಕೆಯನ್ನು ಕರ್ನಾಟಕದ ಶಕ್ತಿದೇವತೆಯ ಪ್ರಮುಖ ಕೇಂದ್ರಗಳಲ್ಲಿ, ಪ್ರಮುಖವಾದ ಸವದತ್ತಿಯ ಶ್ರೀ ಶ್ರೀ ರೇಣುಕಾ ದೇವಿಯ ವಿಶೇಷ ಕೃಪಾಶೀರ್ವಾದಗಳಿಂದ ಈ ಕೃತಿಯನ್ನು ರೂಪಿಸಿದ್ದೇನೆ. ಅನೇಕ ಶಿರಸಾಷ್ಟಾಂಗ ಪ್ರಣಾಮ ಗಳಿಂದ ದೇವಿಯ ಅಡಿದಾವರೆಗಳಿಗೆ ಅರ್ಪಿಸುತ್ತೇನೆ.

ವಿಷಯದ ಸರಳ ನಿರೂಪಣೆಯಲ್ಲಿ ಮಾರ್ಗದರ್ಶನ, ಸಹಕಾರ ತೋರಿದ ಡಾ. ಎಮ್.ಎಫ್. ಕರೆಣ್ಣವರ ಅವರಿಗೆ ಕೃತಜ್ಞತೆ ಗಳು. ಮತ್ತು ಅನೇಕ ರೀತಿಯಿಂದ ಸಹಕರಿಸಿದ ನನ್ನ ಧರ್ಮಪತ್ನಿ ವಸುಮತಿ ಹುಲ್ಲೋಳಿ, ಎಂ.ಎ. ಹಾಗೂ ಪ್ರೊ. ಎಸ್. ಬಿ. ಕುರುಬರ, ಡಾ. ವ್ಹಿ.ಜಿ. ಕುಲಕರ್ಣಿ, ಶ್ರೀ ಎಸ್.ಎಲ್. ಪಾಟೀಲ ಡೆಪ್ಯೂಟಿ ಕಮೀಶನರ ವಾಣಿಜ್ಯ ತೆರಿಗೆ, ಇವರೆಲ್ಲರಿಗೆ ಕೃತಜ್ಞತೆಗಳು.

ಅವಕಾಶ ನೀಡಿದ ವಿಶ್ವವಿದ್ಯಾಲಯಕ್ಕೆ ಕೃತಜ್ಞತೆಗಳು ಹಾಗೂ ಈ ಕಿರುಹೊತ್ತಿಗೆ ಬರುವಲ್ಲಿ ವಿಶೇಷವಾಗಿ ಪ್ರೋತ್ಸಾಹಿಸಿದ ಆತ್ಮೀಯರೂ ಹಾಗೂ ಅಂದಿನ ನಿರ್ದೇಶಕರಾದ ಶ್ರೀ ಎಸ್.ಬಿ. ನಾಯಕ ಅವರಿಗೆ ವಂದನೆಗಳು.

ಬಿ.ವ್ಹಿ.ಬಿ. ಇಂಜನೀಯರಿಂಗ ಕಾಲೇಜ, ಹುಬ್ಬಳ್ಳಿ

ಎಮ್.ಎಸ್. ಹುಲ್ಲೋಳಿ

ಪರಿವಿಡಿ

ಪೀಠಿಕೆ

ಪ್ರಾದೇಶಿಕ ಯೋಜನಾ ಶಾಸ್ತ್ರವು, ಇತ್ತೀಚೆಗೆ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ, ವೈಜ್ಞಾನಿಕವಾಗಿ, ತರ್ಕಬದ್ಧವಾಗಿ ಬೆಳವಣಿಗೆಗೊಂಡ, ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹತ್ವ ವಹಿಸಬಲ್ಲ ಒಂದು ಯೋಜನಾಶಾಸ್ತ್ರವಾಗಿದೆ. ಇದು ವೈಜ್ಞಾನಿಕ ಶಾಸ್ತ್ರವೂ ಹೌದು, ಕಲೆಯೂ ಹೌದು. ಲೆವಿಸ್ ಮುಮ್‌ಫರ್ಡರು (Lewis Mumford) ಹೇಳುವಂತೆ, "ಪ್ರಾದೇಶಿಕ ಯೋಜನಾ ಶಾಸ್ತ್ರವು ಭೂಮಿಯ ಮೇಲೆ ಲಭ್ಯವಿರುವ ಎಲ್ಲ ಸೌಲಭ್ಯಗಳನ್ನು: ಸ್ಥಳ, ಸಂಪನ್ಮೂಲತೆ, ಸುಭದ್ರ ಕಟ್ಟಡ, ಅಥವಾ ರಂಗಸ್ಥಲದಂತೆ; ಉಪಯೋಗಿಸಿಕೊಂಡು ಅವು ಸುಂದರವಾಗಿ ರೂಪಗೊಳ್ಳುವಂತೆ ಮಾಡುವಲ್ಲಿ ಎಲ್ಲ ಕಾರ್ಯಕ್ರಮಗಳನ್ನು ಕ್ರೋಢೀಕರಿಸುವಲ್ಲಿ, ಪ್ರಜ್ಞಾನಿತೆಯನ್ನು ತೋರುವ ಶಾಸ್ತ್ರವಾಗಿದೆ." ಇಲ್ಲಿ ಯೋಜನೆ ಮತ್ತು ಅಭಿವೃದ್ಧಿ ಇವು ಪ್ರಮುಖ ಅಂಗಗಳು. ಪ್ರಾದೇಶಿಕ ಯೋಜನೆಯು, ರಾಷ್ಟ್ರೀಯ ಯೋಜನೆ ಹಾಗು ಸ್ಥಳೀಯ ಯೋಜನೆಗಳಲ್ಲಿ ಹೊಂದಾಣಿಕೆ ಮಾಡುವ ಕೊಂಡಿಯಾಗಿದ್ದು, ಅದರಂತೆ ಅಭಿವೃದ್ಧಿಪಡಿಸಲು ಸಹಕಾರಿಯಾಗಿದೆ. ಪ್ರದೇಶವೆಂದರೇನು ? ಅದರ ಸ್ವರೂಪ ನಿರ್ಣಯಿಸಲು ಮಾರ್ಗದರ್ಶಕ ಸೂತ್ರಗಳೇನು ? ಅವುಗಳ ವೈಶಿಷ್ಟ್ಯಗಳು ಹಾಗೂ ಪ್ರದೇಶಗಳ ಯೋಜನೆಯ ಕಲ್ಪನೆ, ತತ್ವ, ಗುರಿ, ಅಡಕವಾದ ವಿವಿಧ ಸಮಸ್ಯೆಗಳು, ತಯಾರಿ

ಕೆಯ ವಿಧಿ–ವಿಧಾನಗಳು. ನಗರ ಹಾಗೂ ಪ್ರಾದೇಶಿಕ ಯೋಜನೆಗಳ ಸಂಬಂಧಗಳ ಬಗ್ಗೆ ವಿಚಾರಿಸಬೇಕಾಗುತ್ತದೆ. ಮತ್ತು ಅಭಿವೃದ್ಧಿಯ ಬಗೆಗೆ ಅನುಸರಿಸಬೇಕಾದ ಧ್ಯೇಯ ಧೋರಣೆ. ಬಂಡವಾಳ ತೊಡಗಿಸುವಿಕೆಯ ಮಾರ್ಗದರ್ಶಕ ಸೂತ್ರಗಳನ್ನು ಆಲೋಚಿಸಬೇಕಾಗುತ್ತದೆ. ಅಮೇರಿಕೆಯ ಟೆನಿಸ್ಸಿ ಕೊಳ್ಳಪ್ರದೇಶದ ಬೆಳವಣಿಗೆಯ ಅನುಭವಗಳೇನು ? ಮತ್ತು ಭಾರತದಲ್ಲಿ ಪ್ರಾದೇಶಿಕ ಯೋಜನಾತತ್ವದ ಆಧಾರಿತ. ದಾಮೋದರ ನದೀ ಕೊಳ್ಳ ಪ್ರದೇಶ ಬೆಳವಣಿಗೆಯ ಬಗ್ಗೆ ಹಾಗು ಇನ್ನಿತರ ಪ್ರದೇಶಗಳು ಮತ್ತು ಮೆಟ್ರೋಪಾಲಿಟನ್ (ಮಹಾನಗರ) ಪ್ರದೇಶಗಳ ಬೆಳವಣಿಗೆ ಇತ್ಯಾದಿ ವೈಶಿಷ್ಟ್ಯಪೂರ್ಣ ಉದಾಹರಣೆಗಳ ಬಗ್ಗೆ ಅಭ್ಯಾಸ ಅವಶ್ಯ. 'ಪ್ರಾದೇಶಿಕ ಯೋಜನೆ' ತಯಾರಿಕೆಯಲ್ಲಿ ತಜ್ಞರಾದ ಇಂಜಿನೀಯರರು. ಭೂಗೋಲ ಶಾಸ್ತ್ರಜ್ಞರು. ನಗರ ಅಥವಾ ಪ್ರಾದೇಶಿಕ ಯೋಜನಾಕಾರರು ಹಾಗು ಸಾಮಾಜಿಕ-ಆರ್ಥಿಕ ತಜ್ಞರು ಮಹತ್ವದ ಪಾತ್ರ ವಹಿಸಬಲ್ಲರು. ಕರ್ನಾಟಕ ರಾಜ್ಯದಲ್ಲಿಯು. ಪ್ರಾದೇಶಿಕ ಯೋಜನಾಶಾಸ್ತ್ರಧಾರಿತ ಯೋಜನೆ ಹಾಗು ಅಭಿವೃದ್ಧಿ ಪ್ರಯತ್ನಗಳ ಸಮೀಕ್ಷೆ ಮಾಡುವದು ಅವಶ್ಯಕ.

ಈ ಎಲ್ಲ ವಿಷಯಗಳ ವಿವೇಚನೆಯ ಸ್ಥೂಲ ಪರಿಚಯವನ್ನು ಮಾಡಿಕೊಳ್ಳುವದು ಹೆಚ್ಚು ಸೂಕ್ತ.

ಅವಶ್ಯಕತೆ :

ಅಭಿವೃದ್ಧಿ ಹೊಂದದ ಹಾಗು ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪ್ರಾದೇಶಿಕ ಯೋಜನೆಯ ಅವಶ್ಯಕತೆ ಕಂಡು ಬರುತ್ತದೆ.

ಬೇರೆ ಬೇರೆ ದೇಶಗಳಲ್ಲಿ ವಿವಿಧ ಪರಿಸ್ಥಿತಿಗಳು ಕಂಡುಬಂದರೂ ಸಹ. ಒಂದು ಸಾಮಾನ್ಯ ವಿಷಯ ಕಂಡುಬರುವುದೇನೆಂದರೆ. ಔದ್ಯೋಗೀಕರಣ ಹಾಗು ನಗರೀಕರಣಗಳ ಪ್ರಭಾವದಿಂದ ವಸ್ತಿ ಪಟ್ಟಣ ಮತ್ತು ಔದ್ಯೋಗಿಕ ಅಭಿವೃದ್ಧಿಗಳ ಬಗ್ಗೆ ಪ್ರಾದೇಶಿಕ ಭಿನ್ನತೆಗಳು ಕಂಡು ಬರುತ್ತವೆ.

ಭಾರತದಲ್ಲಿ ಸಹ ಪ್ರಾದೇಶಿಕ ಯೋಜನಾ ತತ್ವಗಳ ಅಳವಡಿಕೆ ಅವಶ್ಯಕವಾಗಿದೆ. ಇಲ್ಲಿ ಪ್ರಾದೇಶಿಕ ವೈಶಿಷ್ಟ್ಯತೆಗಳು ಹಾಗೂ ಅಭಿವೃದ್ಧಿ ಸಮಸ್ಯೆಗಳು ಮಹತ್ವದ ಪಾತ್ರವಹಿಸುತ್ತವೆ.

ಭಾರತದಂತಹ ಬೃಹತ್ ರಾಷ್ಟ್ರದಲ್ಲಿ. ಯೋಜನಾಬದ್ಧ ಆರ್ಥಿಕ ಯೋಜನೆಗಳನ್ನು ಸಮಗ್ರ ದೇಶಕ್ಕೆ ಅನುಗುಣವಾಗುವಂತೆ ಅಳವಡಿಸಿದರೆ ಮಾತ್ರ ಫಲಕಾರಿಯಾಗಬಲ್ಲದು. ಅದಕ್ಕಾಗಿ ಎಲ್ಲ ಪ್ರದೇಶಗಳ ಜನರ ಆರ್ಥಿಕ ಪರಿಸ್ಥಿತಿಯ ಗುಣಮಟ್ಟ ಸುಧಾರಿಸುವಂತೆ. ಸತತ ಹಾಗು ಸಮಗ್ರ ದೃಷ್ಟಿಕೋನದ ಯೋಜನೆ ಅವಶ್ಯ.

ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಪ್ರಮುಖ ಮಹಾನಗರಗಳಾದ ಮುಂಬೈ. ದಿಲ್ಲಿ. ಮದ್ರಾಸ. ಕಲಕತ್ತಾ ಹಾಗೂ ಅವುಗಳ ಸುತ್ತಲಿನ ಪ್ರದೇಶಗಳು ಮಾತ್ರ ಬೆಳವಣಿಗೆಯಾದರೆ ಸಾಲದು. ಹಳ್ಳಿಗಾಡು ಪ್ರದೇಶ ಮತ್ತು ನಗರ ಪ್ರದೇಶಗಳು 'ಸಮತೂಕ ಪ್ರದೇಶ'ದ ಅಂಗಗಳಾಗಿ ಸಮಗ್ರ ಬೆಳವಣಿಗೆಯಾಗುವಂತೆ ಬೆಳೆಯಬೇಕು. ಇಲ್ಲದೆ ಹೋದರೆ ಅಸ್ತವ್ಯಸ್ತ ಬೆಳವಣಿಗೆ. ನಗರ–ಹಳ್ಳಿಗಳ ಹೊಂದಾಣಿಕೆ ಇಲ್ಲದ ಬೆಳವಣಿಗೆಗೆ ಕಾರಣ

ವಾಗುತ್ತದೆ. ಈ ದೃಷ್ಟಿಯಿಂದ ಪ್ರಾದೇಶಿಕ ಯೋಜನೆಯ ಅವಶ್ಯಕತೆ ಬಹಳ ಇದೆ.

ಆರ್ಥಿಕ ಯೋಜನೆಗಳ ಕಾರ್ಯಾಚರಣೆಗೆ, ಸರ್ವಾಂಗೀಣ ಪ್ರಗತಿಗೆ ಪ್ರಾದೇಶಿಕ ಯೋಜನೆಗಳು ಬೇಕೇಬೇಕು. ಎಲ್ಲ ಪ್ರದೇಶಗಳಲ್ಲಿ ಸಮತೋಲದ ಹಾಗು ಯೋಗ್ಯ ಬೆಳವಣಿಗೆ ಆಗುತ್ತದೆ. ಇಂಥ ನಿಶ್ಚಿತರೂಪದ, ವೈಜ್ಞಾನಿಕವಾಗಿ ತಯಾರಿಸಿದ ಪ್ರಾದೇಶಿಕ ಯೋಜನೆಗಳು ಇದ್ದರೆ ರಾಜಕೀಯ ಅಧಿಕಾರದ ಮೇಲೆ ಅಭಿವೃದ್ಧಿಯ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ದುರ್ಧರ ಪ್ರಸಂಗ ತಪ್ಪುತ್ತದೆ. ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಇದು ಅತೀ ಅವಶ್ಯಕ. ಅಂದರೆ ರಾಜ್ಯಗಳ ಸಮಗ್ರ ಬೆಳವಣಿಗೆ ಆಗುತ್ತದೆ. ಇಲ್ಲದೆ ಹೋದರೆ ಆಂಧ್ರದಲ್ಲಿ ತಲೆದೋರಿದಂತಹ ಸಮಸ್ಯೆ, ಪ್ರಾದೇಶಿಕ ಭಿನ್ನತೆಯ ಬಿರುಕಿಗೆ ಕಾರಣವಾಗುತ್ತದೆ.

ನಗರ, ಮಹಾನಗರಗಳಿಗೆ ಯೋಜನೆಗಳನ್ನು ರೂಪಿಸುವದರ ಜೊತೆಗೆ, ಪ್ರಾದೇಶಿಕ ಯೋಜನೆಗಳನ್ನೂ ರೂಪಿಸಬೇಕು. ಪೋಲಂಡದಲ್ಲಿ ಆರ್ಥಿಕ ಯೋಜನೆ ಹಾಗು ಪ್ರಾದೇಶಿಕ ಯೋಜನೆಗಳ ಸಾಮರಸ್ಯವಿರುವದರಿಂದ ಪ್ರಗತಿ ಹೊಂದಿದೆ ಎಂದು ಹೇಳಬಹುದು.

ಯೋಜನಾಯುಗ: (Planning Era)

ಹವೆಯು, ಮಾನವನು ಜೀವಿಸಲು ಅತ್ಯಂತ ಅವಶ್ಯವಾದರೂ ಅದು ಅಗಣಿತ, ಅಪಾರ ಪ್ರಮಾಣದಲ್ಲಿ ಲಭ್ಯವಿರುವ ಕಾರಣ ಯೋಜನೆ ಮಾಡುವದು ಬೇಕಿಲ್ಲ. ಆದರೆ ಈಗ ಔದ್ಯೋಗಿಕ

ಕ್ರಾಂತಿಯ ನಂತರ, ಜನಸಂಖ್ಯೆಯ ಸ್ಫೋಟ, ನಗರೀಕರಣದಿಂದಾಗಿ, ಪರಿಸರಮಾಲಿನ್ಯದ ಸಮಸ್ಯೆ ಉದ್ಭವಿಸುತ್ತದೆ. ಇತ್ತಿತ್ತಲಾಗಿ ಯೋಜನೆಯ ಅವಶ್ಯಕತೆ ಕಂಡುಬರುತ್ತದೆ. ಯಾವುದೇ ರಂಗದಲ್ಲಿ ಸಂಪನ್ಮೂಲಗಳ ಕೊರತೆಯಾದಾಗ ಯೋಜನೆಯ ಅವಶ್ಯಕತೆ ಕಂಡುಬರುತ್ತದೆ. ಇದು ಯೋಜನಾ ಯುಗವಾಗಿದ್ದು, ಜೀವನದ ಅನೇಕ ರಂಗಗಳಲ್ಲಿ ಇಂದು ಯೋಜನಾ ಬದ್ಧ ಪ್ರಣಾಳಿ ಮಹತ್ವದ ಪಾತ್ರವಾಡುತ್ತದೆ. ವ್ಯಕ್ತಿ, ಸಮಷ್ಟಿ, ಹಳ್ಳಿಯಿಂದ ಹಿಡಿದು ನಗರ, ಮಹಾನಗರಗಳು, ಪ್ರದೇಶ, ದೇಶ, ಜಗತ್ತು, ರಾಷ್ಟ್ರ ಹಾಗು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಸಹ; ಪ್ರಾಕೃತಿಕ, ಇಂಜಿನೀಯರಿಂಗ, ನದೀಯೋಜನೆಗಳು, ಪಂಚವಾರ್ಷಿಕ ಯೋಜನೆಗಳು, ಸಾಮಾಜಿಕ, ರಾಜಕೀಯ, ಆರ್ಥಿಕ, ಶಿಕ್ಷಣ, ಆರೋಗ್ಯ ಇತ್ಯಾದಿ ಅನೇಕ ರಂಗಗಳಲ್ಲಿ ಯೋಜನಾ ವಿಚಾರಗಳ ಬಳಕೆ, ಕಾರ್ಯಕ್ರಮಗಳನ್ನು ಅಳವಡಿಸಿರುವದನ್ನು ಕಾಣುತ್ತೇವೆ.

ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗಣನೆಗೆ ತೆಗೆದುಕೊಂಡು ಸ್ಥಳೀಯ ಪ್ರಾದೇಶಿಕ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಯ ಅವಿಭಾಜ್ಯ ಅಂಗಗಳೆಂಬಂತೆ. ಹೊಂದಾಣಿಕೆಯಾಗುವಂತೆ ರೂಪಿಸಿ, ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವಂತೆ ರೂಪಿಸಬೇಕು.

ಅಮೇರಿಕೆಯ ಯೋಜನಾಕಾರರ ಸಂಸ್ಥೆಯು "ಪ್ರಾದೇಶಿಕ ಯೋಜನೆಯು, ಮಹಾನಗರ ಹಾಗೂ ಅದರ ಸುತ್ತಲಿನ ಪ್ರದೇಶ

ಹಾಗೂ ಪರಿಸರದ ಸಮಗ್ರ ದೃಷ್ಟಿಕೋನದ ಬೆಳವಣಿಗೆಯನ್ನು ಭೂ ಉಪಯೋಗ ಮತ್ತು ಉದ್ಯೋಗ ಅವಕಾಶಗಳನ್ನು ಸರಿಯಾಗಿ ನಿರ್ಮಿಸಿ ಸಾಧಿಸಲು ಪ್ರಯತ್ನಿಸುತ್ತದೆ" ಎಂದು ಅಭಿಪ್ರಾಯಪಡುತ್ತಾರೆ. ಇದು ಪ್ರದೇಶದ ಜನರ ಅವಶ್ಯಕತೆಗಳನ್ನು ಗಮನಿಸಿ, ಪ್ರಾಕೃತಿಕ ಸಂಪನ್ಮೂಲಗಳನ್ನು ಜಾಣ್ಮೆಯಿಂದ ಹೊಂದಾಣಿಕೆ ಮಾಡುವ ಹಾಗು ಅಭಿವೃದ್ಧಿಪಡಿಸುವ ಸಾಧನವಾಗಿದೆ. ಇದೊಂದು ವಿನ್ಯಾಸ ಎನ್ನುವದಕ್ಕಿಂತ ಕ್ರೋಢೀಕರಣವನ್ನು ಸೃಷ್ಟಿಸುವ ಪ್ರಾಮಾಣಿಕ ಪ್ರಯತ್ನವೆನ್ನಲು ಅಡ್ಡಿಯಿಲ್ಲ. ಮೇಲ್ನೋಟಕ್ಕೆ ಇದು ಒಂದು ಪ್ರಾಕೃತಿಕ ಸಮಸ್ಯೆ ಎಂದು ಕಂಡು ಬರುತ್ತದೆ. ಅಭಿವೃದ್ಧಿಯಲ್ಲಿ. ಇಂಜನೀಯರಿಂಗ ಸಮಸ್ಯೆ, ನೈಸರ್ಗಿಕ ಹಾಗು ಪ್ರಾಕೃತಿಕ ಸಂಪನ್ಮೂಲಗಳ ಬಗ್ಗೆ ಮತ್ತು ಸಂಬಂಧಿಸಿರುವದಾದರೂ. ಅದೇ ಗುರಿಯಲ್ಲ. ಆದರೆ ಗುರಿಯನ್ನು ಸಾಧಿಸುವ ಪ್ರಮುಖ ಸಾಧನವಾಗಿದೆ. ಅದಕ್ಕಾಗಿ ಪ್ರಾದೇಶಿಕ ಯೋಜನೆಯು ಎಲ್ಲ ಕ್ಲಿಷ್ಟ ಸಮಸ್ಯೆಗಳು ಹಾಗೂ ಅವುಗಳ ಪರಸ್ಪರ ಸಂಬಂಧಗಳನ್ನು ಗಣನೆಗೆ ತೆಗೆದುಕೊಂಡು ಆ ಪ್ರದೇಶದ ದೈವದತ್ತವಾದ ಸಂಪನ್ಮೂಲಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ಇಡೀ ಪ್ರದೇಶದ ಸಮೃದ್ಧಿ ಹೊಂದುವಂತೆ ಯೋಜಿಸುತ್ತದೆ. ಅಂದರೆ ಅಭಿವೃದ್ಧಿ ಕಾರ್ಯಕ್ರಮಗಳು ಹಾಗು ಅವುಗಳ ರೂಪರೇಷೆಗಳನ್ನು. ಆ ಪ್ರದೇಶದ ನಿಜವಾದ ಉಚ್ಚತಮವಾದ ಅಭಿವೃದ್ಧಿ ಹೇಗೆ ಆಗಬೇಕೋ ಹಾಗೆಯೇ ಆಗುವಂತೆ ರೂಪಿಸಬೇಕು ಮತ್ತು ದೇಶದ ಒಟ್ಟು ಹಾಗೂ ಪ್ರದೇಶದ ವೈಶಿಷ್ಟ್ಯಗಳಲ್ಲಿ ಹೊಂದಾಣಿಕೆ ಇರುವ ಪರಿಸರವು

ಸಮಗ್ರ ಅಭಿವೃದ್ಧಿಗೆ ಕಾರಣವಾಗುತ್ತದೆ. ಒಟ್ಟಿನಲ್ಲಿ ಅಭಿವೃದ್ಧಿ ಪರ ಸಾಂಸ್ಕೃತಿಕ ಪರಿಸರವೇ ನಿರ್ಮಾಣವಾಗುತ್ತದೆ.

ಸಮಗ್ರ ಹಳ್ಳಿ–ಪಟ್ಟಣಗಳ ಹೊಂದಾಣಿಕೆಯ ಸಮೃದ್ಧಿಯ ದೃಷ್ಟಿಯಿಂದ ಪ್ರಾದೇಶಿಕ ಯೋಜನೆಗಳನ್ನು ರೂಪಿಸಬೇಕು. ಅಂದರೆ ಜನದಟ್ಟಣೆಯ ವಿತರಣೆ. ಆರ್ಥಿಕ ಸಮೃದ್ಧಿ. ಉದ್ಯೋಗಗಳ ಮತ್ತು ಉದ್ದಿಮೆಗಳ ಸ್ಥಾಪನೆ. ಸಾರಿಗೆಸಂಪರ್ಕ ಹಾಗು ಹಳ್ಳಿ–ಪಟ್ಟಣಗಳಿಗೆ ಸಮರ್ಪಕ ಸೇವಾವಕಾಶ ಹಾಗು ಬೆಳವಣಿಗೆಯ ಬಗ್ಗೆ ನಿಶ್ಚಿತವಾದ ಧೋರಣೆ ಹೊಂದಲು ಸಹಾಯವಾಗುತ್ತದೆ.

ಯೋಜನಾ ತತ್ವಗಳು :

ಪ್ರಾದೇಶಿಕ ಯೋಜನೆಯನ್ನು ಕೆಳಗಿನ ಕೆಲವು ತತ್ವಗಳ ಆಧಾರದ ಮೇಲೆ ತಯಾರಿಸುತ್ತಾರೆ.

ಪ್ರಮುಖ ಯೋಜನಾ ಸಮಸ್ಯೆಗಳಾದ ಭೂ–ಉಪಯೋಗ ನೀರಿನ ಉಪಯೋಗ ಮತ್ತು ಸಾರ್ವಜನಿಕ ಕೆಲಸಗಳಿಗೆ ಹೊಂದಿಕೆಯಾಗುವಂತೆ ಪ್ರದೇಶ ಮತ್ತು ಅದರ ಯೋಜನಾ ಕೇಂದ್ರವನ್ನು ಆಯ್ಕೆ ಮಾಡುತ್ತಾರೆ. ಆ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲ ಸರಕಾರಗಳ ಧೋರಣೆಗಳನ್ನು ಕ್ರೋಢೀಕರಿಸಿ, ಸಮಗ್ರ ದೃಷ್ಟಿ ಕೋನದಿಂದ ಯೋಜನಾ ಪ್ರದೇಶಗಳ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ. ಆ ಪ್ರದೇಶದ ಸಮಸ್ಯೆಗಳ ಹಾಗೂ ಅವಕ್ಕೆ ಸಂಬಂಧಿಸಿದ ಎಲ್ಲ ಸರಕಾರಗಳು ಮತ್ತು ತನ್ನವೇ ಆದ ಸಂಸ್ಥೆಗಳೆಲ್ಲವನ್ನೂ ಸುಸಂಘಟಿತಗೊಳಿಸುವ ವಿಶೇಷ ಹೊಣೆ

ಕೇಂದ್ರ ಸರಕಾರದ ಮೇಲೆ ಇರುತ್ತದೆ. ಅದರ ಅಂಗ ಸಂಸ್ಥೆಗಳ ಜವಾಬ್ದಾರಿಯನ್ನು ಅದಕ್ಕೆ ಒಪ್ಪಿಸಿ. ರಾಷ್ಟ್ರೀಯ ಧೋರಣೆಯ ಚೌಕಟ್ಟಿನಲ್ಲಿ ಬೆಳವಣಿಗೆಯಾಗುವಂತೆ ಮಾಡಬೇಕಾಗುತ್ತದೆ.

ಯೋಜನಾಬದ್ಧ ಪ್ರಾದೇಶಿಕ ಬೆಳಕೆ ಹಾಗು ಪ್ರಾದೇಶಿಕ ಯೋಜನಾ ತತ್ವಾಧಾರಿತ ಪ್ರಯತ್ನಗಳಲ್ಲಿ ಅಂತರವಿದ್ದಾಗ್ಯೂ. ಎರಡೂ ಸಂಪನ್ಮೂಲಗಳ ಸಂಯೋಜನೆಯಲ್ಲಿ ಮಹತ್ವದವುಗಳಾಗಿವೆ.

ಕಾಲ ಹಾಗು ರಾಷ್ಟ್ರದ ರಾಜಕೀಯ ತತ್ವಪ್ರಣಾಲಿಗಳ ಆಧಾರದ ಮೇಲೆ ಪ್ರಾದೇಶಿಕ ಯೋಜನೆಯ ತಂತ್ರ ಹಾಗು ಮಾಡತಕ್ಕ ಕೆಲಸಗಳಲ್ಲಿ ಬದಲಾವಣೆ ಬಂದರೂ ಸಹ. ಕೆಲವು ಮೂಲಭೂತ ತತ್ವಗಳು ಎಲ್ಲೆಡೆಗೆ ಪ್ರಭಾವ ಬೀರುತ್ತವೆ. "ವಾಸ ಸ್ಥಳ–ಕೆಲಸ–ಸಮಾಜ". ಇವುಗಳ ಸಮರ್ಪಕ ಹೊಂದಾಣಿಕೆಯು 'ಪೆಟ್ರಿಕ್ ಗೆಡ್ಡಿಸ್' ಹಾಗು 'ಲೀ ಪ್ಲೇ' ಪ್ರಣಾಲಿತ ಪ್ರಸಿದ್ಧ ಯೋಜನಾ ತತ್ವವು ಪ್ರಾದೇಶಿಕ ಯೋಜನೆಗೂ ಅನ್ವಯಿಸಿರುತ್ತದೆ

ಪ್ರಾದೇಶಿಕ ಸಮಸ್ಯೆಗಳ ಪಕ್ಷಿನೋಟದ ಸಾರಸಂಗ್ರಹ ವಿಧಾನ ಪೆಟ್ರಿಕ್ ಗೆಡ್ಡಿಸ್ ರೂಪಿಸಿದಂತೆ, ಇಲ್ಲಿ ಭೌಗೋಲಿ ಪ್ರದೇಶಗಳ ಪರಸ್ಪರ ವಿಕಾಸ. ಪ್ರಾದೇಶಿಕ ಯೋಜನೆ ಹಾಗು ರಾಷ್ಟ್ರೀಯ ಸಮಸ್ಯೆ ಹಾಗು ಧೋರಣೆಗಳಲ್ಲಿ ಹೊಂದಾಣಿ ಮಾಡುವುದು: ಇವು ಪ್ರಾದೇಶಿಕ ಯೋಜನೆಯ ಮೂರು ತತ್ವಗಳಾಗಿವೆ.

ಕಾರ್ಯಾಚರಣೆಯ ದೃಷ್ಟಿಯಿಂದ. ಪ್ರಾದೇಶಿಕ ಯೋಜನೆಯು ಸಾಮಾನ್ಯ ಹಾಗೂ ವಿಶಿಷ್ಟ ಪ್ರಕಾರದ ಯೋಜನೆಯನ್ನು ರೂಪಿಸಿ, ಸುಮಾರು ೧೫-೨೦ ವರ್ಷಗಳಲ್ಲಿ ಆಗಬಹುದಾದ ಸಾಮಾಜಿಕ, ಆರ್ಥಿಕ, ಭೌಗೋಲಿಕ ಬೆಳವಣಿಗೆಯ ರೂಪುರೇಷೆಗಳನ್ನು ತೋರಿಸುತ್ತಾರೆ. ಆ ಪ್ರದೇಶದ ಸಂಪನ್ಮೂಲಗಳ ಸರಿಯಾದ ಬಳಕೆ, ಜನಸಂಖ್ಯೆಯ ಬೆಳವಣಿಗೆಯ ಗತಿ, ಹಾಗು ಜನವಸತಿ ಸಾಂದ್ರತೆ, ವಿತರಣೆಗಳನ್ನು ಗಮನಿಸಿ ಯೋಜನೆಯನ್ನು ರೂಪಿಸುತ್ತಾರೆ. ಸಾಮಾನ್ಯ ಯೋಜನೆಯು. ಯೋಜನಾಕಾರರಿಗೆ ಪ್ರಮುಖ ಮಾರ್ಗದರ್ಶಿಯಾಗಿದ್ದು, ಆ ಪ್ರದೇಶದ ಭೂ ನಕಾಶೆ, ಜನವಸತಿ ವಿತರಣಾ ಸ್ವರೂಪ, ಸಾರಿಗೆಯನ್ನು ಕ್ರೋಢೀಕರಿಸುತ್ತದೆ. ಯೋಜನೆಯ ಮಟ್ಟ ಮತ್ತು ಅಳಗಳು ಪ್ರಾದೇಶಿಕ ವೈಶಿಷ್ಟ್ಯಗಳನ್ನು ಅವಲಂಬಿಸಿವೆ. ಆದರೆ ತಾತ್ವಿಕ ಹಾಗೂ ಕಾರ್ಯಾಚರಣೆಯ ವಿಧಾನಗಳು ಮಾತ್ರ; ಯಾವುದೇ ಪ್ರದೇಶದ ಸ್ವರೂಪ ಆದರೆ ಮಹಾನಗರ ಪ್ರದೇಶ ಅಥವಾ ಕೃಷಿಪ್ರದೇಶ ಅಥವಾ ಔದ್ಯೋಗಿಕ ಪ್ರದೇಶಗಳೇ ಇರಲಿ ಸಾಮಾನ್ಯವಾಗಿವೆ.

ಯೋಜನಾ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಜನತೆಯು ಭಾಗವಹಿಸುವಂತೆ ಮಾಡುವದು ಅತ್ಯಅವಶ್ಯವಿದೆ. ಸಾಮಾನ್ಯವಾಗಿ ಕೆಳಗಿನಂತೆ ಪ್ರಮುಖ ಹಂತಗಳನ್ನು ಗುರುತಿಸಬಹುದು. ಗುರಿ, ಉದ್ದೇಶ, ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ, ಯೋಜನೆಗಳ ತಯಾರಿಕೆ, ಕಾರ್ಯಾಚರಣೆ ಮತ್ತು ಆಳತೆಗೋಲು ಇವೇ ಆ ಹಂತಗಳು.

ಯೋಜನೆಗಳನ್ನು ತಯಾರಿಸುವಾಗ ಸಮಗ್ರತೆಯಿಂದ ವಿವರಗಳ ಕಡೆಗೆ ಲಕ್ಷ್ಯ ವಹಿಸುವುದು ಹೆಚ್ಚು ಸೂಕ್ತ. ಇವು ಯೋಜನಾ ತತ್ವಗಳ ತಾತ್ವಿಕ ಹಿನ್ನೆಲೆಯ ಕಲ್ಪನೆಯನ್ನು ಕೊಡುತ್ತವೆ.

ಮಾಹಿತಿ ಸಂಗ್ರಹಣೆ:

ಕೆಳಗಿನ ಮಾಹಿತಿ ಸಂಗ್ರಹ ಮಾಡಿದಲ್ಲಿ ಪ್ರಾದೇಶಿಕ ಯೋಜನೆಗೆ ಅವಶ್ಯಕವಾದ ನಕಾಶೆಗಳನ್ನು ತಯಾರಿಸಲು ಅನುಕೂಲವಾಗುತ್ತದೆ.

೧) ಪ್ರಾಕೃತಿಕ ಸಂಗತಿಗಳು:

ಭೂಸ್ಥಿತಿ. ಉಪಯುಕ್ತವಲ್ಲದ ತಗ್ಗುದಿನ್ನೆಗಳ ಪ್ರದೇಶ ಪ್ರಾದೇಶಿಕ ಭೂಗರ್ಭ ವಿಷಯಗಳು. ರಮಣೀಯ ಪ್ರದೇಶಗಳು ಮತ್ತು ವಿಹಂಗಮ ನಕ್ಷೆಗಳು:

೨) ಪ್ರಕೃತಿಜನ್ಯ–ಆರ್ಥಿಕ ವಿಷಯಗಳು:

ಕೃಷಿ. ಖನಿಜ ಆಗರಗಳು. ಜಲಾಶಯ. ಭೂಮಿಗಳು, ಸೇವಾ ಸೌಲಭ್ಯಗಳು ದೊರೆಯುತ್ತಿರುವ ಪ್ರದೇಶಗಳು. ಸಾರಿಗೆ ಇತ್ಯಾದಿ.

೩) ಸಾಮಾಜಿಕ–ಆರ್ಥಿಕ ವಿಷಯಗಳು:

ನಗರ ಗ್ರಾಮಗಳ ಒತ್ತಡಕ್ಕೆ ಒಳಗಾಗಿರುವ ಪ್ರದೇಶ, ಅವುಗಳ ಪರಸ್ಪರ ಸಂಬಂಧ. ಉದ್ಯೋಗಾವಕಾಶ. ಜನಸಂಖ್ಯೆಯ ಪರಿಳಿತ ಇತ್ಯಾದಿ.

ಜನಸಾಂದ್ರತೆ ಹಾಗೂ ಉದ್ಯೋಗಾವಕಾಶಗಳಲ್ಲಿ ಸಮತೋಲ ಸಾರಿಗೆ ಸಂಪರ್ಕ, ಅವಶ್ಯಕ ಸೇವೆಗಳು, ಒಕ್ಕಲುತನ, ನಗರ-ಹಳ್ಳಿಗಳಲ್ಲಿ ಸರಿಯಾದ ಉಪಯೋಗಗಳಿಗೆ ನಾವು ಹೆಚ್ಚು ಲಕ್ಷ್ಯ ಕೊಟ್ಟು ವಿಚಾರಿಸಬೇಕಾಗುತ್ತದೆ. ಎಲ್ಲಕ್ಕೂ ಅನುಕೂಲವಾಗುವಂತೆ ಪ್ರದೇಶ, ಪ್ರದೇಶಗಳ ನಡುವಿನ ಭದ್ರತೆ, ಆರ್ಥಿಕ ಅಭಿವೃದ್ಧಿ, ನಿರುದ್ಯೋಗ ನಿವಾರಣೆಯ ದೃಷ್ಟಿ, ಕೇಂದ್ರೀಕರಣ ಅಥವಾ ವಿಕೇಂದ್ರೀಕರಣ, ಹೊಸ ಹೊಸ ಉದ್ದಿಮೆ ಸ್ಥಾಪನೆ, ಕೈಗಾರಿಕೆಗಳು, ಇವು ಮಹತ್ವದ ವಿಷಯಗಳು. ಉದ್ದಿಮೆಗಳ ಸ್ಥಾಪನೆಯಲ್ಲಿ ಧೋರಣೆ, ಹಣ, ಕೂಲಿಕಾರ ಸಮಸ್ಯೆ, ಪ್ರಾದೇಶಿಕ ಸಂಪತ್ತುಗಳ ವಿವರವಾದ ಅಭ್ಯಾಸ ಮಾಡಬೇಕಾಗುತ್ತದೆ.

ಜನಾಭಿವೃದ್ಧಿಯ ಸಮಸ್ಯೆ, ವಲಸೆಹೋಗುವದು, ಪ್ರಾದೇಶಿಕ, ಆರ್ಥಿಕ, ಸಾಮಾಜಿಕ ಸಮಸ್ಯೆ, ಹೊಸ ಸುಧಾರಿಸಿದ ಪ್ರಾದೇಶಿಕ ವಿಜ್ಞಾನದ ಪ್ರಮೇಯಗಳನ್ನು ಉಪಯೋಗಿಸಬೇಕಾಗುತ್ತದೆ. ಸಮಗ್ರದೃಷ್ಟಿ, ಪ್ರದೇಶ ಜ್ಞಾನ, ರಾಷ್ಟ್ರೀಯ ಮಟ್ಟದ ಯೋಜನೆಯ ರೂಪರೇಷೆ, ಧೋರಣೆಗಳ ಜೊತೆಗೆ ಹೊಂದಿಕೆಗಳು, ಇವು ಮಹತ್ವದ ಅಂಶಗಳು.

ಅಮೇರಿಕೆಯ ಎಮ್.ಆಯ್.ಟಿ., ಮ್ಯಾಸಚ್ಯುಟ್ಸಿನ ಡಾ. ವಾಲ್ಟರ ಇಜಾರ್ಡರು ತಮ್ಮ "ಮೆಥಡ್ಸ ಆಫ್ ರಿಜನಲ್ ಎನಾಲಿಸಿಸ್" ಎನ್ನುವ ಪುಸ್ತಕದಲ್ಲಿ ನಿವೇದಿಸಿದ ಕೆಳಗಿನ ಪ್ರಮೇಯಗಳು ನಮಗೆ ವಿಶ್ಲೇಷಣೆಗೆ ಸಹಾಯ ಮಾಡುತ್ತವೆ.

೧ ಪ್ರಾದೇಶಿಕ ಸಮಾಜದ ಆದಾಯ–ವೆಚ್ಚದ ಅಂದಾಜು ಚಿತ್ರ.

೨ ಅಂತರ ಪ್ರಾದೇಶಿಕ ಬೆಳವಣಿಗೆಯ ವಿಚಕ್ಷಣೆ.

೩ ಪ್ರಾದೇಶಿಕ ಆರ್ಥಿಕ ಭದ್ರತೆ.

೪ ಉದ್ಯಮಗಳ ಸ್ಥಾಪನೆಗೆ ಅನುಕೂಲ ಮಾಡುವ ಸಂಗತಿಗಳ ವಿಚಕ್ಷಣೆ.

೫ ಅಂತರ ಪ್ರಾದೇಶಿಕ ಮತ್ತು ಪ್ರಾದೇಶಿಕ ಕ್ರಿಯಾತ್ಮಕ ವಸ್ತುಗಳ ವಿನಿಮಯ ವಿಷಯ.

೬ ವಿಶಿಷ್ಟ, ಔದ್ಯೋಗಿಕ ಉದ್ಯಮಗಳ. ಬೆಳವಣಿಗೆಯ ಅನುಕೂಲತೆಗಳ ಸಾರಸಂಗ್ರಹ.

೭ ಅಂತರ ಪ್ರಾದೇಶಿಕ ನಿಯೋಜಿತ ಕಾರ್ಯಕ್ರಮಗಳ ಪಟ್ಟಿ.

೮ ಸ್ಥಳೀಯ, ವಿಶಿಷ್ಟ, ಸೌಕರ್ಯಗಳ ಪ್ರಾದೇಶಿಕ ಯೋಜನೆಯ ತಳಹದಿಯ ಮೇಲೆ ವಿಚಕ್ಷಣೆ.

೯ ಸರಳ, ನಿರರ್ಗಳವಾದ ಬೆಳವಣಿಗೆ.

ಈ ವಿಶಿಷ್ಟ ಪ್ರಮೇಯಗಳನ್ನು ಉಪಯೋಗಿಸಿ ಮಾಡಿದ ವಿಶ್ಲೇಷಣೆಯು ನಮಗೆ ಸತ್ಯಕ್ಕೆ ಹಾಗು ರಚನಾತ್ಮಕ ಕಾರ್ಯಕ್ರಮದ ಯೋಜನೆಗೆ ಬಹು ಸಹಕಾರಿಯಾಗಬಲ್ಲದು. ಮಾಹಿತಿ ಸಂಗ್ರಹದ ವಿಶ್ಲೇಷಣೆಯು. ನಮಗೆ ಮುಂದೆ ನಾವು ನಿಯೋಜಿಸಬಹುದಾದ ವಿಷಯಗಳನ್ನು ಸೂಕ್ಷ್ಮವಾಗಿ ಸೂಚಿಸುತ್ತದೆ.

ಭೂಗೋಲ ಶಾಸ್ತ್ರಜ್ಞರ ವಿಶೇಷ ಕಾಣಿಕೆ :

ಪ್ರಾದೇಶಿಕಯೋಜನಾ ಶಾಸ್ತ್ರವು ಅಂತರ–ವಿಜ್ಞಾನವಾದ್ದು, ಭೂಗೋಲ ಶಾಸ್ತ್ರಜ್ಞರು, ತಜ್ಞರಾದ ಇಂಜನೀಯರರು,

ನಗರ ಅಥವಾ ಪ್ರದೇಶ ಯೋಜನಾಕಾರರು ಹಾಗೂ ಸಾಮಾಜಿಕ ಆರ್ಥಿಕ ತಜ್ಞರು ಮಹತ್ವದ ಪಾತ್ರ ಮಾಡಬಲ್ಲರು. ಭೂಗೋಲ ಶಾಸ್ತ್ರಜ್ಞರ ವಿಶೇಷ ಕಾರ್ಯ, ಯೋಜನೆ ತಯಾರಿಕೆಯಲ್ಲಿ ಕೆಳಗಿನಂತೆ ಇರುತ್ತದೆ.

೧. ಪ್ರಾದೇಶಿಕ ಭೂ ಉಪಯೋಗದ ಸಮೀಕ್ಷೆ, ನಕ್ಷೆ ತಯಾರಿಕೆ ಮತ್ತು ಅದರ ವಿಶ್ಲೇಷಣೆ ಹಾಗೂ ಕ್ರೋಢೀಕರಣ.
೨. ಮುಂದೆ ಬಳಸಬಹುದಾದ ಭೂ ಉಪಯೋಗದ ಸಮೀಕ್ಷೆ ಹಾಗೂ ಅದರ ಅಂದಾಜು ಚಿತ್ರ.
೩. ಯೋಜನೆ ಮಾಡುವದಕ್ಕೆ ಅನುಕೂಲವಾಗುವಂತೆ ಪ್ರದೇಶಗಳ ಗಡಿ ಗುರುತಿಸುವದು ಮತ್ತು ಆಡಳಿತಾತ್ಮಕ ದೃಷ್ಟಿಕೋನದಿಂದ ಗಡಿಗಳ ಮರು ಹೊಂದಾಣಿಕೆ.
೪. ಪ್ರದೇಶದ ಮಾಹಿತಿಯನ್ನು ಜನಗಣತಿ ಹಾಗೂ ಸಂಖ್ಯಾಶಾಸ್ತ್ರ ದೃಷ್ಟಿಕೋನದಿಂದ ವಿಂಗಡಿಸುವದು.
೫. ಕೇಂದ್ರ ಹಾಗು ಸಾರ್ವಜನಿಕ ಸೇವಾಸೌಲಭ್ಯಗಳನ್ನು ಪ್ರಾದೇಶಿಕ ಅವಶ್ಯಕತೆಗಳಿಗೆ ಅನುಕೂಲವಾಗುವಂತೆ ವಿತರಣೆಯನ್ನು ಯೋಜಿಸುವದು.

ನಕ್ಷೆಗಳ ಸಮೀಕ್ಷೆ:

ಪ್ರಾದೇಶಿಕ ಯೋಜನೆಯನ್ನು ರೂಪಿಸುವಾಗ ಇಂದಿನ ಪರಿಸ್ಥಿತಿಯ ಅವಲೋಕನದಿಂದ, ಮುಂದೆ ೧೫–೨೦ ವರ್ಷಗಳಲ್ಲಿ ಆಗಬಹುದಾದ ಬದಲಾವಣೆಯನ್ನು ಗಮನಿಸಿ. ಸಂಪನ್ಮೂಲಗಳನ್ನು ಅತ್ಯಂತ ಗರಿಷ್ಠ ಮಟ್ಟದಲ್ಲಿ ಬಳಸಿ ಅನುಕೂಲವಾಗುವಂತೆ,

ಯೋಜನಾ ಉದ್ದೇಶಗಳು ಸಫಲವಾಗುವಂತೆ ಸಂಯೋಜಿಸುವದು ಅತಿ ಮುಖ್ಯ. ಈ ಸಂದರ್ಭದಲ್ಲಿ ಅನೇಕ ನಕ್ಷೆಗಳನ್ನು ತಯಾರಿಸುತ್ತಾರೆ.

೧ ಬೆಳವಣಿಗೆಗೆ ಅಯೋಗ್ಯವಾದ ಪ್ರಾಕೃತಿಕ ವಿಷಯಗಳ ಭೂ ನಕ್ಷೆ. (Map of waste land)

೨ ನೈಸರ್ಗಿಕ ರಮ್ಯ, ರಮಣೀಯ ಸ್ಥಳಗಳ ನಕ್ಷೆ. (Landscape map)

೩ ಸಾರ್ವಜನಿಕ ಸೇವಾ ಸೌಲಭ್ಯಗಳ ನಕ್ಷೆ. (Map of Public Services)

೪ ಸಾರಿಗೆ ಸಾಂದ್ರತೆ ನಕ್ಷೆ. (Map of Traffic density)

೫ ನಗರ–ಹಳ್ಳಿ–ಸುತ್ತಲಿನ ಪ್ರದೇಶಗಳ ಪರಸ್ಪರ ಪ್ರಭಾವ ನಕ್ಷೆ. (Areas of urban influence)

೬ ಪ್ರದೇಶದ ಜನತೆಯು ದಿನ ಬಳಕೆಯ ಕೆಲಸಕ್ಕಾಗಿ ಬಳಸುವ ಸಾರಿಗೆ ಮತ್ತು ಪ್ರದೇಶದ ವಿವಿಧ ಸ್ಥಳಗಳ ನಕ್ಷೆ. (Map of Place of work)

೭ ವಿಶೇಷ ಬೆಳವಣಿಗೆಗೆ ಲಭ್ಯವಾಗುವ ಸ್ಥಳಗಳ ನಕ್ಷೆ. (Factors limiting development)

೮ ಒಂದನೆಯ ಹಂತದ ಪ್ರಾದೇಶಿಕ ಯೋಜನಾ ನಕ್ಷೆ. (First Stage diagram of Regional Plan)

೯ ಎರಡನೆಯ ಹಂತದ ಪ್ರಾದೇಶಿಕ ಯೋಜನಾ ನಕ್ಷೆ. (Second stage of Regional Plan)

ಯೋಜನೆ ಮಾಡುವದಕ್ಕೆ ಪ್ರದೇಶದ ಗಡಿ ಗುರುತಿಸುವದು

ಪ್ರಾದೇಶಿಕ ಯೋಜನೆಯ ಪ್ರಥಮ ಹೆಜ್ಜೆ ಎಂದರೆ, ಯೋಜನೆ ಮಾಡುವದಕ್ಕೆ ಆ ಪ್ರದೇಶದ ಗಡಿ ಗುರುತಿಸುವದು. ಕೇವಲ ರಾಜಕೀಯ ಅಥವಾ ಆಡಳಿತಾತ್ಮಕ ಇಲ್ಲವೆ ಯಾವದೇ ಕೃತ್ರಿಮ ಘಟಕವಾಗಿರದೆ, ಅದು ಮಾನವ ನಿರ್ಮಿತ ಹಾಗೂ ನೈಸರ್ಗಿಕ ವಿಷಯಗಳು ಕೂಡಿ ನಿರ್ಮಿಸಿದ ಏಕರೂಪದ ಮತ್ತು ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಪರಸ್ಪರ ಅವಲಂಬಿತ ಪ್ರದೇಶ ಘಟಕವಾಗಿರಬೇಕು. ಇಲ್ಲಿ ನದಿ, ಕೊಳ್ಳ, ಹಳ್ಳಿ, ಪಟ್ಟಣ ಇವೆಲ್ಲವುಗಳಲ್ಲಿ, ಒಂದರಲ್ಲಿ ಆದ ಬದಲಾವಣೆ ಇನ್ನೊಂದರಲ್ಲಿ ಪ್ರತಿಬಿಂಬಿತವಾಗುತ್ತದೆ. ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕವಾಗಿ ಸಮಗ್ರರೀತಿಯಿಂದ ಪ್ರದೇಶದಲ್ಲಿ ಅಭಿವೃದ್ಧಿಯಾಗಬೇಕು. ವ್ಯವಹಾರಿಕವಾಗಿ ಒಂದು ದೃಷ್ಟಿಕೋನದಿಂದ ಪ್ರದೇಶದ ವ್ಯಾಪ್ತಿಯನ್ನು ಮಾಡಿ, ಆ ಮಾನದಿಂದ ಏಕರೂಪದಂತೆ ಭಾವಿಸಿ, ಯೋಜನೆ ಮಾಡುವದಕ್ಕೆ ತೆಗೆದುಕೊಳ್ಳುತ್ತೇವೆ. ನದೀಕೊಳ್ಳ ಪ್ರದೇಶ ಮತ್ತು ಅರಣ್ಯ ಪ್ರದೇಶಗಳು ಎರಡೂ ಹೊಂದಾಣಿಕೆ ಆಗದೇ ಇರಬಹುದು. ಆದಾಗ್ಯೂ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕವಾಗಿ ಪರಸ್ಪರ ಅವಲಂಬಿತ ಪ್ರದೇಶದ ಗಡಿಯನ್ನು ಯೋಜನೆಗಾಗಿ ಗುರುತಿಸಬೇಕು.

ನದೀಕೊಳ್ಳ ಯೋಜನೆ ಮಾಡಿದಾಗ ಮಣ್ಣಿನ ರಕ್ಷಣೆ, ಅರಣ್ಯ ಬೆಳವಣಿಗೆ, ಜಲಸಾರಿಗೆ, ನೆರೆಹಾವಳಿ ನಿಯಂತ್ರಣಗಳು ಇಂಥ ಅನೇಕ ಅನುಕೂಲತೆಗಳು ಆ ಪ್ರದೇಶದ ಜನರಿಗೆ ಆಗ

ಬಹುದು. ಆದರೆ ವಿವಿಧೋದ್ದೇಶಗಳ ವಿದ್ಯುಚ್ಛಕ್ತಿ ಯೋಜನೆ ಮಾಡಿದಾಗ ಯೋಜಿತ ಪ್ರದೇಶಕ್ಕಿಂತಲೂ ಹೆಚ್ಚು ಪ್ರದೇಶವನ್ನು ಅವಶ್ಯಕತೆಗೆ ಅನುಗುಣವಾಗಿ ಗಡಿ ಗುರುತಿಸಬೇಕಾಗುತ್ತದೆ. ಸಾರಿಗೆ, ಔದ್ಯೋಗಿಕ ಅವಶ್ಯಕತೆ, ಭೂ ಉಪಯೋಗ, ಅರಣ್ಯ ಒಕ್ಕಲುತನ, ಇತ್ಯಾದಿ ಅವಶ್ಯಕತೆಗಳು.

ಯೋಜನಾ ದೃಷ್ಟಿಯಿಂದ ಮಾತ್ರ ಗಡಿ ಗುರುತಿಸುವದು ಈ ಎಲ್ಲ ದೃಷ್ಟಿಕೋನಗಳಿಂದ ಮಾತ್ರ ಸಾಧ್ಯ.

ಮಹತ್ವದ ಅಂಶಗಳು :

ಪ್ರಾದೇಶಿಕ ಯೋಜನೆಯಲ್ಲಿ, ಯೋಜನೆಗಾಗಿ ಗಡಿ ಗುರುತಿಸಿದ ನಂತರ, ಯೋಜನೆ ಮಾಡುವದಕ್ಕೆ ಕೆಲವೊಂದು ಮಹತ್ವದ ಅಂಶಗಳ ಬಗ್ಗೆ ನಮಗೆ ತಿಳಿದಿರಬೇಕಾಗುತ್ತದೆ.

ಮಾನವ–ಪರಿಸರ ವಿಜ್ಞಾನ: ಜನಸಂಖ್ಯೆ ಸಮೀಕ್ಷೆ: ಪ್ರಾದೇಶಿಕ ಯೋಜನೆ: ಭೂ ಉಪಯೋಗ: ವ್ಯವಸಾಯ: ಪರಿಸರ ಸಮತೋಲನ ರಕ್ಷಣೆ, ಉದ್ದಿಮೆಗಳು: ಸಾರಿಗೆ ಹಾಗು ಸಂಪರ್ಕ ಸೌಲಭ್ಯಗಳು: ಸಾಮಾಜಿಕ ಸೇವಾಸೌಲಭ್ಯಗಳು ಇತ್ಯಾದಿ.

೧ ಮಾನವ ಪರಿಸರ ವಿಜ್ಞಾನ : (Human Ecology)

ಒಂದು ಪ್ರದೇಶದ ಸಾಮಾಜಿಕ ಆರ್ಥಿಕ ಅಭಿವೃದ್ಧಿಯು ಬೆಳವಣಿಗೆಯು ಆ ಪ್ರದೇಶದ ಸಾಮಾಜಿಕ ಸ್ವರೂಪವನ್ನು ಅವಲಂಬಿಸಿರುತ್ತದೆ. ಮಾನವ ಕೇಂದ್ರವು, ಬೆಳವಣಿಗೆಯಲ್ಲಿ ಕೇಂದ್ರ ಬಿಂದುವಾಗಿ ಪ್ರಭಾವ ಬೀರುತ್ತದೆ. ಇದನ್ನು ಹಳ್ಳಿಗಳ

ಗಿಂತ ನಗರಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಗುರುತಿಸಬಹುದು. ಒಂದು ದೇವಾಲಯ ಅಥವಾ ಪಂಚಾಯತಿ ಸುತ್ತ ಇಡೀ ಹಳ್ಳಿಯು ಸುತ್ತುವರಿದಿರುವದನ್ನು ಕಾಣುತ್ತೇವೆ. ನಗರಗಳು, ಒಂದು ವಾಣಿಜ್ಯ ಕೇಂದ್ರ ಇಲ್ಲವೆ ಔದ್ಯೋಗಿಕ ಕೇಂದ್ರದ ಸುತ್ತ ಬೆಳೆದುದನ್ನು ಕಾಣುತ್ತೇವೆ. ಆದರೆ ಬೆಳವಣಿಗೆಯು ಇಚ್ಚಿತ ಇಲ್ಲವೆ ಅಇಚ್ಚಿತ ರೂಪದಲ್ಲಿ ಬೆಳೆದುದನ್ನು ಗಮನಿಸುತ್ತೇವೆ. ಯೋಜನಾ ಬದ್ಧ ಬೆಳವಣಿಗೆಗಾಗಿ ಔದ್ಯೋಗಿಕ ಕೇಂದ್ರಗಳ ಸರಿಯಾದ ಸ್ಥಳ; ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಆಹ್ಲಾದಕರ ಸೌಲಭ್ಯಗಳು ದೊರೆಯಬೇಕು. ಪ್ರಾದೇಶಿಕ ಯೋಜನೆಯಲ್ಲಿ ಸದ್ಯದ ಹಾಗೂ ದೊರೆಯಬೇಕಾದ ಸೌಲಭ್ಯಗಳನ್ನು ದೊರಕಿಸಿಕೊಟ್ಟು, ಹಳ್ಳಿ, ಪಟ್ಟಣಗಳ ಸುತ್ತಲಿನ ಪರಿಸರದ ಸುಮಧುರ ಬೆಳವಣಿಗೆಯು ಉಂಟಾಗುವಂತೆ ಮಾಡುವದೇ ಜಾಣತನ. ನದೀಕೊಳ್ಳ ಯೋಜನೆ ರಾಷ್ಟ್ರೀಯ ಸೇವಾ ಸೌಲಭ್ಯ ಯೋಜನೆಗಳು ಮುಂತಾದವು, ಪ್ರಾದೇಶಿಕ ಯೋಜನೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ.

೨ ಜನಸಂಖ್ಯೆ ಸಮೀಕ್ಷೆ : (Population Survey)

ಪ್ರಾದೇಶಿಕ ಯೋಜನೆ ತಯಾರಿಸುವಾಗ ಸಮಗ್ರ ಜನಸಂಖ್ಯೆಯ ಸಮೀಕ್ಷೆಯನ್ನು ಮಾಡಿ, ಜನಸಂಖ್ಯೆಯ ಸ್ವರೂಪ, ಜನಸಂಖ್ಯೆ, ವಯೋಮಿತಿ ಗುಂಪುಗಳು, ಗಂಡು ಹೆಣ್ಣುಗಳ ಪ್ರಮಾಣ ಇತ್ಯಾದಿ ವಿಷಯಗಳನ್ನು ಗಮನಿಸುವದರ ಜೊತೆಗೆ ಜನತೆಯ ಆದಾಯ, ಆದಾಯ ಮಟ್ಟ, ಹಾಗು ವಿಭಾಗಗಳನ್ನು, ಅನೇಕ ಜನಗಣತಿಯ ಅಂಕೆ ಸಂಖ್ಯೆಗಳ ಆಧಾರದ ಮೇಲೆ

ತುಲನಾತ್ಮಕವಾಗಿ ಅಭ್ಯೆಸಿಸಿ, ಸದ್ಯದ ಜನತೆಯು ಕಷ್ಟ–ಸುಖಗಳು, ಕೊರತೆಗಳು, ಸಂಪನ್ಮೂಲಗಳು ಹಾಗೂ ಉದ್ಯೋಗ ನಿರ್ಮಿತಿಯಲ್ಲಿ ಅವುಗಳ ಸರಿಯಾದ ಉಪಯೋಗ ಇತ್ಯಾದಿಗಳನ್ನು ಗಮನಿಸಬೇಕು. ಮತ್ತು ಆ ಪ್ರದೇಶದ ಪ್ರತ್ಯಕ್ಷ ಸಮೀಕ್ಷೆಯನ್ನು ಮಾಡಿ ಜನಸಂಖ್ಯೆಯ ಬೆಳವಣಿಗೆಯ ಗತಿ, ಜನನ–ಮರಣ ಪ್ರಮಾಣ, ಒಟ್ಟು ಬೆಳವಣಿಗೆ ಹಾಗೂ ಸಾಕ್ಷರತೆ, ರೋಗಗಳು, ಸಾಂಸ್ಕೃತಿಕ ಚಟುವಟಿಕೆಗಳನ್ನು, ಮುಂದೆ ಯೋಜನಾ ಅವಧಿಯಲ್ಲಿ ಬೆಳೆಯಬಹುದಾದ ಜನಸಂಖ್ಯೆ ಹಾಗೂ ಮೇಲೆ ಸೂಚಿಸಿದ ವಿಷಯಗಳ ಅವಶ್ಯಕತೆಗಳ ಪ್ರಮಾಣ ಕಂಡು, ಯೋಜನಾಬದ್ಧ ರೀತಿಯಲ್ಲಿ ಜನಸಂಖ್ಯೆಯ ವಸತಿ ಸ್ವರೂಪದ ಬಗ್ಗೆ ನಿಶ್ಚಿತವಾದ ಧ್ಯೇಯ ಧೋರಣೆಗಳನ್ನು, ಸಮೀಕ್ಷೆಯ ಆಧಾರಿತ ಸೂಚಿತ ವಿಷಯಗಳನ್ನು ಗಮನಿಸಿ, ಅದರ ಪರಿಣಾಮ ತಿಳಿದು ಯೋಜನಾಕಾರರು ನಿಶ್ಚಿತ ಸ್ವರೂಪದ ಕ್ರಮಗಳನ್ನು ಸೂಚಿಸಬೇಕು.

೩ ಪ್ರಾಕೃತಿಕಯೋಜನೆ : (Physical Planning)

(ಪ್ರಾಕೃತಿಕ, ಭೌಗೋಲಿಕ, ನೈಸರ್ಗಿಕ ಸಂಪನ್ಮೂಲಗಳ ಸಮೀಕ್ಷೆ).

ನೈಸರ್ಗಿಕ ಸಂಪನ್ಮೂಲಗಳ ಉಪಯೋಗವು ಸ್ಥಳೀಯ ಜನತೆಗೆ ಆಗುವಂತೆ ಮಾಡುವದು ಅವಶ್ಯವಿರುವದರಿಂದ ಪ್ರಾಕೃತಿಕ, ಭೌಗೋಲಿಕ ಯೋಜನೆಯು ಪ್ರಾದೇಶಿಕ ಯೋಜನೆಯ ಅನಿವಾರ್ಯವಾದ ಅಂಗವಾಗಿದೆ. ಪ್ರಾಕೃತಿಕ ಸಂಗತಿಗಳಲ್ಲಿ ನಮಗೆ ಬಹಳಷ್ಟು ಮಟ್ಟಿಗೆ ಬದಲಾವಣೆ ಮಾಡುವದು ಸಾಧ್ಯವಿಲ್ಲ ವಾದರೂ, ನಮ್ಮ ಅಭಿವೃದ್ಧಿ ಯೋಜನೆಗಳನ್ನು ಅವುಗಳಿಗೆ ಹೊಂದಾಣಿಕೆಯಾಗುವಂತೆ ಮತ್ತು ಅವುಗಳ ಗರಿಷ್ಠ ಉಪಯೋಗ

ವಾಗುವಂತೆ, ರೂಪಿಸುವದು ನಮ್ಮ ಕರ್ತವ್ಯ. ಪರ್ವತ ಪ್ರದೇಶ, ದಟ್ಟವಾದ ಅಡವಿ, ಬಯಲು ಪ್ರದೇಶ, ನದೀಕೊಳ್ಳ ಪ್ರದೇಶ, ಮರುಭೂಮಿ, ಮಳೆಗಳು, ಹವಾಮಾನ ಇತ್ಯಾದಿ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಅರಿಯಬೇಕು. ವನ್ಯಪ್ರಾಣಿ, ಪಕ್ಷಿಗಳು, ಸಸ್ಯ, ಉದ್ಯೋಗ ಹಾಗೂ ಅವುಗಳ ಸ್ವರೂಪ ಇತ್ಯಾದಿ ಪ್ರಾದೇಶಿಕ, ವೈಶಿಷ್ಟ್ಯಗಳನ್ನು ಅರಿಯಬೇಕು. ಒಕ್ಕಲುತನ ಹಾಗೂ ಅರಣ್ಯ ಗಳನ್ನು ಅಭಿವೃದ್ಧಿಗಾಗಿ ಅವಶ್ಯಕವಾದ ಮಾಹಿತಿ, ಭೂಗರ್ಭ ಶಾಸ್ತ್ರೀಯ ಮಾಹಿತಿ, ಭೂಗರ್ಭದ ಜಲಸಂಪನ್ಮೂಲಗಳು, ಮಳೆಗಾಲ, ಚಳಿಗಾಲ, ಬೇಸಿಗೆ, ಸರಾಸರಿ ಮಳೆ ಪ್ರಮಾಣ ಇತ್ಯಾದಿ ಮಾಹಿತಿ ಸಂಗ್ರಹಿಸಬೇಕು. ಯಾವದೇ ಪ್ರದೇಶದ ಹವಾಮಾನ, ಒಣ ಹವೆ, ಆರ್ದ್ರ ಹವೆ, ಅರೆಆರ್ದ್ರ ಹವೆ ಇತ್ಯಾದಿ ಮಾಹಿತಿಗಳ ಪರಿಣತಿಯಿಂದ ಹೆಚ್ಚು ಪರಿಣಾಮಕಾರಿಯಾಗಿ ಯಾವ ಸ್ವರೂಪದ ಔದ್ಯೋಗಿಕ ಅವಕಾಶಗಳು ಯಶಸ್ವಿಯಾಗಿ ನಡೆದು, ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಬಲ್ಲವು ಅಥವಾ ನೀರಾವರಿ ಯೋಜನೆ, ಒಕ್ಕಲುತನದ ಪರಿಣಾಮಕಾರಿ ಬೆಳವಣಿಗೆಯ ಉಪಯೋಗ ಜನತೆಗೆ ಸುಖಸಂತೋಷ ತರಬಲ್ಲವು ಎಂಬುದು ನಮಗೆ ಮುಖ್ಯವಾದ ವಿಷಯವಾಗಿದೆ.

೪ ಭೂ ಉಪಯೋಗ : (Land uses)

ಭೂ ಉಪಯೋಗದ ಸಮೀಕ್ಷೆಯ ಮಹತ್ವವು ಪ್ರಾದೇಶಿಕ ಯೋಜನೆಯಲ್ಲಿ ಹಿರಿದು. ಭಾರತದಲ್ಲಿ ಲಭ್ಯವಿರುವ ಪ್ರಮುಖ ಮಣ್ಣಿನ ಪ್ರಕಾರಗಳಾದ ರೇವೆ ಮಣ್ಣು, ಎರೆ ಮಣ್ಣು, ಕೆಂಪು

ಹಾಗೂ ಲ್ಯಾಟರಾಯಿಟಗಳ ಮಾಹಿತಿಯನ್ನು ಅರಿತರೆ ಸಾಲದು
ಹೆಚ್ಚು ಪ್ರಮಾಣದ ಅನೇಕ ವಿಧದ ಪ್ರಕಾರಗಳನ್ನು ಅರಿತ
ಒಳ್ಳೆಯದು. ಅಮೇರಿಕೆಯಲ್ಲಿ ಭೂ ಸಂರಕ್ಷಣೆಯ ಹೆಚ್ಚಿ
ಅಭ್ಯಾಸದ ಮಾಹಿತಿಯ ಆಧಾರದ ಮೇಲೆ, ನಾವು ಭೂ
ಯಲ್ಲಿರುವ ಕಲ್ಲು, ಭೂ ಸವಕಳಿ, ಇಳಿಜಾರು, ಕಲ್ಲು-ಹರಳು
ಪ್ರಮಾಣ, ಮಣ್ಣಿನ ಪ್ರಮಾಣ ಹಾಗು ದಪ್ಪಳತೆ ಈ ಮಾಹಿ
ಯನ್ನು ಅರಿತು ಭೂಮಿಯು ಯಾವ ಉಪಯೋಗಕ್ಕೆ ಹೆಚ್
ಯೋಗ್ಯ ಎನ್ನುವದನ್ನು ನಿರ್ಧರಿಸಬಲ್ಲೆವು. ಔದ್ಯೋ
ಪ್ರದೇಶದ ಸುತ್ತಲಿನ, ಹಸಿರು ಸುತ್ತಲಿನ ಪ್ರದೇಶದ ಬ
ಹಾಗೂ ಪಟ್ಟಣಗಳಲ್ಲಿ ಕೃಷಿ ಕಾರ್ಮಿಕರ ಸಮಸ್ಯೆ ಇತ್ಯಾ
ವಿಷಯಗಳನ್ನು ಲಕ್ಷದಲ್ಲಿಡಬೇಕು. ಮಣ್ಣಿನ ಸ್ವರೂಪ, ಗು
ಮಟ್ಟ ಇತ್ಯಾದಿ ಮಾಹಿತಿಯ ಆಧಾರದ ಮೇಲೆ ಬೆಳೆಗಳನ
ಸೂಚಿಸುವದು, ನೀರಿನ ಸಂಗ್ರಹ ನೆಲೆಗಳು, ಕ್ಷಾಮ ಪ್ರದೇ
ಪ್ರಾದೇಶಿಕ ಸ್ವರೂಪ ಹಿನ್ನೆಲೆ ಇತ್ಯಾದಿ. ಭೂಮಿಯ ಸರಿಯಾ
ಬಳಕೆಗಾಗಿ, ಒಕ್ಕಲುತನ, ಔದ್ಯೋಗಿಕ, ರಸ್ತೆ, ರೇಲ್ವೆ, ಅರ
ನಗರ-ಹಳ್ಳಿಗಳ ನಿರ್ಮಾಣ, ನೈಸರ್ಗಿಕ ರಮ್ಯ ನೆಲೆಗಳು ಇವು
ಉಪಯೋಗಕ್ಕಾಗಿ ಹೆಚ್ಚು ಯೋಗ್ಯವಾದ ಉಪಯೋಗಕ್ಕೆ, ಜ
ಸಂಖ್ಯೆಯ ಒತ್ತಡ, ದೈವದತ್ತವಾದ ಭೂಮಿಯ ಉಪಯೋ
ಅವಶ್ಯಕತೆಯ ಸ್ಪರ್ಧೆ ಇತ್ಯಾದಿ ಅಂಶಗಳಿಂದ ಸರಿಯಾದ ಉ
ಯೋಗದ ರೂಪರೇಷೆಗಳನ್ನು ನಿರ್ಧರಿಸಬೇಕಾಗುತ್ತದೆ.

೫ ವ್ಯವಸಾಯ : (Agriculture)

ಕೃಷಿ ಪ್ರಾಧಾನ್ಯವುಳ್ಳ ಭಾರತದಲ್ಲಿ ಯಾವದೇ ಪ್ರಾದೇ
ಯೋಜನೆಯನ್ನು ತಯಾರಿಸುವಾಗ ಕೃಷಿಯ ಮಹತ್ವವ

ಕಡೆಗಣಿಸಲಾಗದು. ಹವಾಮಾನ, ದಟ್ಟ ಜನವಸತಿ, ಭೂ ಹಾಗೂ ಜನಸಂಖ್ಯೆಯ ಪ್ರಮಾಣ ಇವೇ ಕೆಲ ಅಂಶಗಳನ್ನು ಅಭ್ಯಸಿಸ ಬೇಕಾಗುತ್ತದೆ. ಕೃಷಿಗೆ ಸಂಬಂಧಿಸಿದ ಪ್ರಾದೇಶಿಕ ವೈಶಿಷ್ಟ್ಯ ಮಾಹಿತಿಗಳಾದ ಸದ್ಯದ ಪರಿಸ್ಥಿತಿ, ಮುಂದೆ ಬಳಸಬಹುದಾದ ಬದಲಾವಣೆ, ಭೂ ಸವಕಳಿ, ತುಂಡು ಭೂಮಿಗಳು, ಭೂರಹಿತ ಜನತೆಯ ಒತ್ತಡ, ಸಹಕಾರಿ ಪತ್ತಿನ ಸೌಲಭ್ಯಗಳು ಇತ್ಯಾದಿ. ಹಸಿರು ಕ್ರಾಂತಿಗಾಗಿ, ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿಗೆ ಪ್ರಾಧಾನ್ಯತೆ ಕೊಟ್ಟು, ನೀರಾವರಿ ಯೋಜನೆಗಳನ್ನು ಅಳವಡಿಸಿದರು. ರೈತರಿಗೆ ಅನೇಕ ವಿಷಯಗಳಲ್ಲಿ ಮಾಹಿತಿ ಕೊಟ್ಟು ಅವರು ಪ್ರಗತಿಪರ ರೈತರಾಗುವಂತೆ ಪ್ರಯತ್ನಿಸಲಾಯಿತು. ಅಂದರೆ ಮಾರುಕಟ್ಟೆ, ಹೆಚ್ಚು ಬೆಳೆ ಯೋಜನೆ, ಆಧುನಿಕ ಕೃಷಿತಂತ್ರ, ಗೊಬ್ಬರ, ಸಾಲಸೌಲಭ್ಯಗಳು. ಸರಕಾರದ ಯೋಜನೆಗಳ ಹಾಗೂ ಸಾಲಸೌಲಭ್ಯಗಳ ಬಗ್ಗೆ ಮಾಹಿತಿ, ಬೆಳೆಗಳ ಆಯ್ಕೆ ಮಣ್ಣಿನ ಗುಣಮಟ್ಟಗಳ ಶಾಸ್ತ್ರೀಯ ಆಧಾರದ ಮೇಲೆ ಇತ್ಯಾದಿ ಮತ್ತು ಸಹಕಾರಿ ಕೃಷಿ; ರಶಿಯ, ಚೀನ, ಅಮೇರಿಕೆಯಲ್ಲಿ ಬಳಕೆಗೆ ಬಂದ ಕೃಷಿ ತರಬೇತಿ ಹಾಗೂ ತಂತ್ರಗಳು, ಸಂಶೋಧನೆ ಹಾಗು ಅವುಗಳ ಫಲ ಸಾಮಾನ್ಯ ಜನತೆಗೆ ಹಾಗೂ ರೈತರಿಗೆ ಮುಟ್ಟಿಸುವದು ಇತ್ಯಾದಿ ವಿಷಯಗಳ ಬಗ್ಗೆ ಜನತೆಗೆ ತಿಳಿವಳಿಕೆ ಕೊಟ್ಟು ಕೃಷಿ ಕಾಲೇಜು ಹಾಗೂ ಸಂಶೋಧನೆ ಸಂಸ್ಥೆಗಳನ್ನು ದೇಶದಲ್ಲಿ ಸ್ಥಾಪಿಸಿದರು. ಭಾರತದಲ್ಲಿ ಆಹಾರ ಸ್ವಾವಲಂಬನೆಯನ್ನು ಸಾಧಿಸುವಲ್ಲಿ; ಕೃಷಿಗೆ ಪ್ರಾಧಾನ್ಯತೆ ಕೊಟ್ಟು ಕೈಕೊಂಡ ಯೋಜನೆಗಳ ವಿಶೇಷ ಫಲವೆಂದೇ ಹೇಳಬಹುದು.

೬ ಪರಿಸರ-ಸಮತೋಲನ ರಕ್ಷಣೆ :

(Ecological balance

ಜನಸಂಖ್ಯೆಯ ಒತ್ತಡ, ಔದ್ಯೋಗಿಕರಣ, ಪರಿಸ ಮಾಲಿನ್ಯ, ಜಲ-ವಾಯು ಮಾಲಿನ್ಯ, ಅರಣ್ಯಗಳ ನಾಶ, ಹವಾ ಮಾನದ ಮೇಲೆ ಆದ ಭೀಕರ ಪರಿಣಾಮ, ಬರಗಾಲ, ಅತಿವೃಷ್ಟಿ ಅನಾವೃಷ್ಟಿ ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಇಂದ ಅಂತರ ವಿಜ್ಞಾನಗಳ ಸಹಾಯದಿಂದ ಪರಿಸರ ಸಮತೋಲನ ರಕ್ಷಣೆ ಮಾಡುವದು ಅತೀ ಮಹತ್ವದ ಅಂಶವಾಗಿದೆ. ಅರಣ್ಯಗ ಬೆಳವಣಿಗೆ, ನಿಸರ್ಗದತ್ತ ಕೃಷಿ ಭೂಮಿಯ ಸಂರಕ್ಷಣೆ ಇತ್ಯಾ ಮಹತ್ವದ ಅಂಶಗಳಿಗೆ ಆದ್ಯತೆ ನೀಡಬೇಕಾಗಿದೆ. ಪರಿಸ ಸಮತೋಲನದ ಯೋಜನೆ ರೂಪಿಸುವಲ್ಲಿ ಪ್ರಾದೇಶಿಕ ಯೋಜ ಮಾಡುವದು ಒಂದು ಮಹತ್ವದ ಕಾರ್ಯವಾಗಿದೆ.

೭ ಉದ್ದಿಮೆಗಳು : (Industries)

ಸದ್ಯದ ಸಮೀಕ್ಷೆಯ ಪಕ್ಷಿನೋಟದಿಂದ ಕಂಡು ಬರು ಅಂಶವೆಂದರೆ, ವಿವಿಧ ಪ್ರದೇಶಗಳಲ್ಲಿ ಉದ್ದಿಮೆಗಳು ಅಸ್ತವ್ಯಸ ವಾಗಿ ಬೆಳವಣಿಗೆಗೊಂಡು, ಸಮತೂಕದ ಬೆಳವಣಿಗೆಯ ಕೊರ ಹಾಗೂ ಅವುಗಳ ಜನಜೀವನದ ಮಟ್ಟದ ಮೇಲೆ ದುಷ್ಪರಿಣಾ ಬೀರಿ, ನಗರಗಳು ಹೆಚ್ಚಾಗಿ ಹಳೆ ನಗರಗಳು ಕೊಳಚೆ ಪ್ರದೇಶಗ ಆಗರಗಳಾಗಿ ಆಧುನಿಕ ಸಂಸ್ಕೃತಿಗೆ ಕಲಂಕಪ್ರಾಯವಾಗಿ ಬೆಳೆದಿ ನಾವು ಸ್ಥಳೀಯ ಸಂಪನ್ಮೂಲಗಳಾಧಾರಿತ ಉದ್ದಿಮೆಗಳಿಂದ ಹೆಚ ಜನರಿಗೆ ಉದ್ಯೋಗದ ಅವಕಾಶಗಳು ದೊರೆಯುವಂತೆ ಹಾಗ ಉದ್ದಿಮೆಗಳು ಹೆಚ್ಚು ವೈವಿಧ್ಯಪೂರ್ಣವಾಗಿರುವಂತೆ ನೋ

ಕೊಳ್ಳಬೇಕು ಮತ್ತು ಜನತೆಯ ಜೀವನಮಟ್ಟವನ್ನು ವಿಸ್ತರಿಸು ವಂತಾಗಬೇಕು. ಜನತೆ ಇದ್ದಲ್ಲಿಗೆ ಉದ್ದಿಮೆಗಳು ಹೋಗು ವಂತಾಗಿ, ಜನತೆಯ ಅನವಶ್ಯಕ ವಲಸೆಯನ್ನು ತಡೆಯಬೇಕು. ಜನರು ತಮ್ಮ ಮನೆಗಳಿಂದ ಬಹಳ ದೂರ ಕೆಲಸಕ್ಕೆ ಹೋಗು ವಂತಾಗಬಾರದು. ಉದ್ದಿಮೆಗಳು ಅನುಕೂಲ ಸ್ಥಳಗಳಲ್ಲಿ ಇರಬೇಕು. ಇದು ಜನತೆಯ ಆಶೆ. ಆ ಪ್ರದೇಶದ ಸಂಪನ್ಮೂಲ ಗಳಾಧಾರಿತ ಉದ್ದಿಮೆಗಳು ಬೆಳೆಯಬೇಕು. ಕಚ್ಚಾ ಪದಾರ್ಥ ಗಳನ್ನು ಹೊರಗೆ ಕಳಿಸಿದರೆ ಜನತೆಯು ಉದ್ದಿಮೆಯ ಲಾಭ ಹಾಗೂ ಉದ್ಯೋಗಾವಕಾಶಗಳನ್ನು ಕಳೆದುಕೊಳ್ಳಬೇಕಾಗುವದು. ಅದಕ್ಕಾಗಿ ಉದ್ದಿಮೆಗಳು ತಯಾರಾದ ವಸ್ತುಗಳನ್ನು ರಫ್ತು ಮಾಡುವಂತಾಗಬೇಕು. ಆದ್ದರಿಂದ ಉದ್ದಿಮೆಗಳನ್ನು, ಆದಷ್ಟು ಒಳ್ಳೇ ಫಲವತ್ತಾದ ಭೂಮಿಯನ್ನು ಹಾಳುಮಾಡದೆ, ನಿರುಪ ಯುಕ್ತ ಹಾಗು ಬಂಜರು ಸ್ಥಳಗಳಲ್ಲಿ ಪ್ರಾರಂಭಿಸಬೇಕು. ಸರಕಾರವು ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಗೃಹಕೈಗಾರಿಕೆ ಗಳನ್ನು ಲಕ್ಷಾಂತರ ಜನರಿಗೆ ಉದ್ಯೋಗ ಒದಗಿಸಲು ಪ್ರಯತ್ನಿಸಿ ಸ್ಥಾಪಿಸಿದೆ. ಆದಾಗ್ಯೂ ನಿರುದ್ಯೋಗದ ಸಮಸ್ಯೆ ಇನ್ನೂ ತಾಂಡವಾಡುತ್ತಿದೆ. ಉದ್ದಿಮೆಗಳನ್ನು ಸ್ಥಾಪಿಸುವಾಗ ಆ ಪ್ರದೇಶದ ಸಂಪನ್ಮೂಲಗಳು, ಹಣ, ಮಾರುಕಟ್ಟೆ, ಲಭ್ಯ ಕುಶಲತೆ ಗಳನ್ನು ಯಾವ ಮಟ್ಟದಲ್ಲಿ ಗಣನೆಗೆ ತೆಗೆದುಕೊಂಡಿವೆ ಎಂದು ನಿಶ್ಚಿತವಾಗಿ ಹೇಳಲಾರೆವು. ಗ್ರಾಮೀಣ ಪ್ರದೇಶದಲ್ಲಿ ಸಣ್ಣ, ಗೃಹ ಕುಶಲ ಕೈಗಾರಿಕೆಗಳು ಹೆಚ್ಚು ಉಪಯುಕ್ತ. ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯವಾಗಿ ಹಣ, ಕುಶಲಕರ್ಮಿಗಳ ಕೊರತೆ

ಬಹಳ. ತಯಾರಿಕಾ ವೆಚ್ಚಗಳು ಉದ್ದಿಮೆಯು ಆರ್ಥಿಕ ಸ್ವರೂಪವನ್ನು ನಿರ್ಧರಿಸುತ್ತವೆ. ನೇಕಾರಿಕೆ, ಕಾಗದ, ಮೊದಲಾದ ಮತ್ತು ಒಕ್ಕಲುತನ ಆಧಾರಿತ ಉದ್ದಿಮೆಗಳ ಉಪಯುಕ್ತತೆ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಉಪಯುಕ್ತ. ಅನುಭವದ ದೃಷ್ಟಿಯಿಂದ, ಸ್ವಿಝರಲ್ಯಾಂಡ (Switzer land) ದೇಶದಲ್ಲಿ ಹೆಚ್ಚು ಸೂಕ್ಷ್ಮ ಕುಶಲತೆಯಿಂದ ಕೈಗಡಿಯಾರದ ಉದ್ದಿಮೆಯಲ್ಲಿ ಇಡೀ ಜಗತ್ತಿನಲ್ಲಿಯೇ ಹೇಗೆ ಏಕೆ ಸ್ವಾಮ್ಯ ಸ್ಥಾಪಿಸಿದೆ ಎಂಬುದನ್ನು ಗಮನಿಸಬೇಕು.

ಈಗ ಸರಕಾರದ ಗ್ರಾಮೀಣ ವಿದ್ಯುತ್‌ಚ್ಛಕ್ತಿ ಹಾಗೂ ಜಲವಿದ್ಯುತ್ ಯೋಜನೆಗಳನ್ನು ರೂಪಿಸುತ್ತದೆ. ಆದರೆ ಅವುಗಳನ್ನು ಪ್ರಾದೇಶಿಕ ಯೋಜನಾ ಸಮೀಕ್ಷೆಯಿಂದ ಅಳವಡಿಸಿದಾಗ ಹೆಚ್ಚು ಉಪಯುಕ್ತವಾಗುತ್ತವೆ. ಅದರ ಫಲವು ಪ್ರದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತದೆ.

೮ ಸಾರಿಗೆ ಹಾಗು ಸಂಪರ್ಕ ಸೌಲಭ್ಯಗಳು :

(Transport and Communications)

ಹಿಂದುಳಿದ ಪ್ರದೇಶಕ್ಕೆ ಯೋಜನೆ ತಯಾರಿಸುವಾಗ, ಸಾರಿಗೆ ಹಾಗೂ ಸಂಪರ್ಕಗಳು ಅತೀ ಮಹತ್ವದ ಪಾತ್ರವಹಿಸುತ್ತವೆ. ಒಂದು ಪ್ರದೇಶದ ಅಭಿವೃದ್ಧಿಯಾಗಬೇಕಾದರೆ ಅದರ ಆಂತರಿಕ ಹಾಗು ಬಾಹ್ಯ ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳು ಸಾಕಷ್ಟು ಸಮರ್ಪಕವಾಗಿದ್ದರೆ ಮಾತ್ರ ಸಾಧ್ಯವೆಂದೇ ಹೇಳಬಹುದು. ಭಾರತದಲ್ಲಿ ರಸ್ತೆ ಹಾಗು ರೇಲ್ವೆ ಮಾರ್ಗಗಳು ಇನ್ನೂ ಹೆಚ್ಚಾಗಿ ಅದರ ಅಭಿವೃದ್ಧಿಯಲ್ಲಿ ಬೇಕಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ.

ಒಳ್ಳೇ ಸಮರ್ಥವಾದ ಸಾರಿಗೆ ಸುವ್ಯವಸ್ಥೆಯು, ಜನರು ಹಾಗೂ ವಾಹನಗಳ ಹೋಗು ಬರುವಿಕೆಯು, ಬೇರೆ ಬೇರೆಯಾಗಿ ಹಾಗೂ ಹೊಂದಾಣಿಕೆಯ ಮೇಲೆ ಅವಲಂಬಿಸಿದೆ. ಜನರ ಸಮೂಹ, ನಗರ ಅಂತರಿಕ ಸಾರಿಗೆ, ವಸ್ತುಗಳ ವಹಿವಾಟು, ನಗರ ಹಾಗೂ ಸುತ್ತಲಿನ ಪ್ರದೇಶಗಳಿಗೆ ಮತ್ತು ಅಂತರ ಪ್ರದೇಶಗಳಲ್ಲಿ ಸಂಪರ್ಕಗಳನ್ನು ಸರಿಯಾಗಿ ಕಲ್ಪಿಸುವಂತಾಗಬೇಕು. ಚಕ್ಕಡಿ ಗಾಡಿಯಿಂದ ಹಿಡಿದು ಮೋಟಾರ ಸಾರಿಗೆವರೆಗೆ ಸುವ್ಯವಸ್ಥಿತವಾಗಿ ಯೋಜಿಸಿ ಮಾರ್ಗಗಳನ್ನು ರೂಪಿಸಬೇಕು. ಸಾಧ್ಯವಿದ್ದ ಪ್ರದೇಶಗಳಲ್ಲಿ ಜಲಸಾರಿಗೆ ಅನುಕೂಲವಿದ್ದರೆ ಉಪಯೋಗಿಸಬೇಕು. ಅಂದರೆ ರಸ್ತೆ ಹಾಗು ರೇಲ್ವೆ ಸಾರಿಗೆಯ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ವಿವಿಧ ಸಾರಿಗೆಯ ವ್ಯವಸ್ಥೆಗಳಲ್ಲಿ ಹೊಂದಾಣಿಕೆಯಿದ್ದು, ಆ ಪ್ರದೇಶದ ಅವಶ್ಯಕತೆಗಳನ್ನು ಪೂರೈಸುವಲ್ಲಿ ಅನುಕೂಲವಾಗಿದ್ದು, ರಾಷ್ಟ್ರೀಯ ಸಾರಿಗೆ ವ್ಯವಸ್ಥೆಯ ಚೌಕಟ್ಟಿನಲ್ಲಿ ಹೊಂದುವಂತಿರಬೇಕು.

೯ ಸಾಮಾಜಿಕ ಸೇವಾ ಸೌಲಭ್ಯಗಳು: (Social Services)

ಸಾಮಾಜಿಕ ಸೇವಾ ಸೌಲಭ್ಯಗಳು ವೈವಿಧ್ಯಮಯವಾದ ವಿಷಯಗಳನ್ನು ಒಳಗೊಂಡಿದ್ದು, ಶಿಕ್ಷಣ, ಆರೋಗ್ಯ, ವಸತಿ ಮತ್ತು ಕ್ರೀಡಾ ಹಾಗೂ ವಿನೋದ ಸೌಲಭ್ಯಗಳನ್ನು ಹೊಂದುತ್ತವೆ. ನಮ್ಮ ದೇಶದಲ್ಲಿ ಈ ಸೌಲಭ್ಯಗಳು ಕನಿಷ್ಠ ಪ್ರಮಾಣವನ್ನು ಹೊಂದಿವೆ. ಸಾಕ್ಷರತೆಯ ಪ್ರಮಾಣ ಹೆಚ್ಚಾಗಿದ್ದರೂ ಸಹ ಇನ್ನೂ ಉಚ್ಚವ್ಯಾಸಂಗ ಹಾಗೂ ತಾಂತ್ರಿಕ ಶಿಕ್ಷಣಗಳು, ಬಡತನ

ರೇಷೆಯು ಕೆಳಜನರಿಗೆ ಇದು ಒಂದು ಗಗನ ಕುಸುಮವಾಗಿದೆ. ನಗರ ಹಾಗು ಗ್ರಾಮೀಣ ಪ್ರದೇಶಗಳಲ್ಲಿ ವಸತಿ ಸಮಸ್ಯೆ ಇನ್ನೂ ಸಮಸ್ಯೆಯಾಗಿಯೇ ಇದೆ. ನೆಮ್ಮದಿಯ ಜೀವನ ನಡೆಸುವದಕ್ಕೆ ಬೇಕಾಗುವ ಕನಿಷ್ಠ ಸ್ಥಳಾವಕಾಶ ಹಾಗೂ ಸೌಲಭ್ಯಗಳುಳ್ಳ ಮನೆಗಳನ್ನು ದೊರಕಿಸಿ ಕೊಡುವಂತೆ ಮಾಡುವದು ಅವಶ್ಯಕವಾಗಿದೆ. ನಿಜವಾಗಿ ಯಾವದೇ ಒಳ್ಳೇ ವಸತಿ, ಶಿಕ್ಷಣ, ಆರೋಗ್ಯ ಸೌಲಭ್ಯಗಳು, ನಿರ್ಮಲ ವಾತಾವರಣ, ಸ್ವಚ್ಛ ಪರಿಸರವಿಲ್ಲದೆ, ಸಾಮಾಜಿಕ ಆರ್ಥಿಕ ಬೆಳವಣಿಗೆ ಹಾಗೂ ಸಂಸ್ಕೃತಿಯು ಬೆಳೆಯುವದು ಸಾಧ್ಯವಿಲ್ಲ. ಸಿನೇಮಾ ಚಿತ್ರಮಂದಿರಗಳು ನಗರ ಪ್ರದೇಶಗಳಲ್ಲಿ ಮನರಂಜನೆಯ ಸಾಧನಗಳಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಜಾನಪದ ಕಲೆಗಳು ಮಹತ್ವದವುಗಳಾಗಿವೆ. ಎಲ್ಲರಿಗೂ ಸಮುದ್ರ ತೀರ, ಗಿರಿಧಾಮಗಳಿಗೆ ವಿಹಾರ ವಿಶ್ರಾಂತಿಗಳಿಗಾಗಿ ಹೋಗಲು ಸಾಧ್ಯವಾಗದೇ ಹೋಗಬಹುದು. ಅದಕ್ಕಾಗಿ ಆ ಪ್ರದೇಶದ ನಗರ ಹಾಗೂ ಗ್ರಾಮೀಣ ಸ್ಥಳಗಳಲ್ಲಿ ಲಭ್ಯವಿರುವ ನೈಸರ್ಗಿಕ ಸುಂದರ ತಾಣಗಳನ್ನು ವಿಶ್ರಾಮ, ವಿಹಾರ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಬೇಕು. ಅಂದರೆ ಜನತೆಯು ಮಾನಸಿಕ ಆರೋಗ್ಯ ಪಡೆದು ಹೆಚ್ಚು ಸಮರ್ಥರಾಗಿ ಕಾರ್ಯಪ್ರವೃತ್ತರಾಗಬಲ್ಲರು.

ಪ್ರದೇಶದ ವ್ಯಾಖ್ಯೆ ಹಾಗೂ ವಿವಿಧ ಪ್ರದೇಶಗಳು :
(Definition of Region & different kinds of regions

ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಬೆಳವಣಿಗೆಯಲ್ಲಿ ಪ್ರಾದೇಶಿಕ ಸಮತೋಲನವನ್ನು ನಿರ್ಮಿಸುವ ಪ್ರಕ್ರಿಯೆಯ

ಪ್ರಾದೇಶಿಕ ಯೋಜನೆಯಾಗಿದೆ. ಇಲ್ಲಿ ಪ್ರದೇಶದ ವ್ಯಾಖ್ಯೆಯನ್ನು ಸ್ಥಳೀಯ ಇಲ್ಲವೆ ಭೌಗೋಲಿಕ ಆಧಾರದ ಮೇಲೆ ಮಾಡಿದಾಗ ಅದಕ್ಕೆ ಕೆಲವು ಶರ್ತ ಹಾಗು ಮಿತಿಗಳಿವೆ. ಅದಕ್ಕಾಗಿ ಪ್ರದೇಶವೆಂದಾಗ ಕ್ಷೇತ್ರಫಲವುಳ್ಳದ್ದು ಹಾಗೂ ಅದರ ಗಾತ್ರದ ಅಳತೆಗೋಲಿನಿಂದ ನಿರ್ಣಯಿಸಬಹುದಾದದ್ದು ಎಂಬ ವಿಚಾರ ಬರುತ್ತದೆ.

ಒಂದು ವಿಶಿಷ್ಟ ದೃಷ್ಟಿಕೋನದಿಂದಲೂ ಅಂದರೆ ಸಾಮಾಜಿಕ, ಆರ್ಥಿಕ, ರಾಜಕೀಯ, ಭೌಗೋಲಿಕ, ವಿಶಿಷ್ಟ ಅಳತೆಗೋಲಿನಿಂದಲೂ ಪ್ರದೇಶಗಳ ವ್ಯಾಖ್ಯೆಗಳನ್ನು ಮಾಡಬಹುದು. ಕನ್ನಡ ಮಾತನಾಡುವವರ ಪ್ರದೇಶ, ರಾಜಕೀಯ ಪ್ರದೇಶ, ನದಿಕೊಳ್ಳ ಪ್ರದೇಶ, ಕೃಷಿಪ್ರಧಾನವಾದ ಪ್ರದೇಶ, ಔದ್ಯೋಗಿಕ ಪ್ರದೇಶ ಇತ್ಯಾದಿ.

ಪ್ರಾಕೃತಿಕ ಅಂಶಗಳನ್ನು ಮಾತ್ರ ತೆಗೆದುಕೊಂಡರೆ ಅಂದರೆ ಭೂ ಪ್ರದೇಶಗಳು, ಹವಾಮಾನ, ಮಣ್ಣು, ಸಸ್ಯ ಇತ್ಯಾದಿ ಅಂಶಗಳಿಂದ ಪ್ರದೇಶಗಳ ವ್ಯಾಖ್ಯೆ ಮಾಡಿ ಗಡಿ ಗುರುತಿಸಿದರೆ ಪ್ರಾಕೃತಿಕ ಭೌಗೋಲಿಕ ಪ್ರದೇಶಗಳೆನ್ನುತ್ತಾರೆ.

ಆರ್ಥಿಕ ಪ್ರಾಮುಖ್ಯತೆಯ ಅಂಶದಿಂದ ಮಾಡಿದರೆ ಆರ್ಥಿಕ ಪ್ರದೇಶಗಳೆನ್ನುತ್ತಾರೆ. ಕೇವಲ ಧಾರ್ಮಿಕ, ಭಾಷೆ ಇತ್ಯಾದಿ ಅಂಶಗಳಿಂದ ಗುರುತಿಸಿದ ಪ್ರದೇಶಗಳಿಗೆ ಸಾಮಾಜಿಕ–ಸಾಂಸ್ಕೃತಿಕ ಪ್ರದೇಶಗಳೆನ್ನುತ್ತಾರೆ.

ಭೌಗೋಲಿಕ ಸಾಮಾಜಿಕ–ಆರ್ಥಿಕ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮಾಡಿದ ಪ್ರದೇಶಕ್ಕೆ ಸಮಗ್ರ (Compage) ಪ್ರದೇಶಗಳೆನ್ನುತ್ತಾರೆ. ಇವು ಜಟಿಲವಾದ ರಚನೆ ಅಥವಾ ತೊಡಕಾದ ಚೌಕಟ್ಟಿನಿಂದ ಪರಿಮಿತವಾಗಿವೆ. ಇವೆಲ್ಲವುಗಳಿಗೆ ಪ್ರಾದೇಶಿಕ ಸಾಮ್ಯತೆಗಳೇ ಆಧಾರವಾಗಿವೆ.

ಪ್ರಾದೇಶಿಕ ವೈಶಿಷ್ಟ್ಯತೆಗಳನ್ನು ಗುರುತಿಸಿ ತನ್ನದೇ ಆದ ಜೀವನ ವಿಧಾನವನ್ನು ರೂಪಿಸುವ ಸ್ವಯಂ ನಿಯೋಜಿತ ಪ್ರಕ್ರಿಯೆಯೇ ಪ್ರಾದೇಶಿಕತೆಯಾಗಿದೆ.

ಸಂಪನ್ಮೂಲಗಳನ್ನು ಅವುಗಳ ಅತ್ಯಧಿಕ ಉಪಯೋಗವು ಪ್ರಾದೇಶಿಕ ಅಭಿವೃದ್ಧಿಗೆ ಸಹಾಯಕವಾಗುವಂತೆ ಮಾಡುವದೇ ಯೋಜನೆಯ ಪ್ರಮುಖ ಗುರಿಯಾಗಿದೆ.

ಇಲ್ಲಿ ಅನೇಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಮತೂಕವನ್ನು ಅಥವಾ ಸಮತೋಲನವನ್ನು ಸಾಧಿಸುವುದೇ ಮುಖ್ಯವಾಗಿದೆ. ಅವಶ್ಯಕತೆ–ಸಂಪನ್ಮೂಲಗಳು, ಭೌಗೋಲಿಕ ಆಂತರ ಪ್ರದೇಶಗಳು, ದೇಶದ ಇತರ ಭಾಗಗಳು, ದೂರ–ಸಮೀಪ ದೃಷ್ಟಿಯ ವಿವಿಧ ಹೊಸ ಅಭಿವೃದ್ಧಿ ಮಾರ್ಗಗಳು, ಉತ್ಪನ್ನ ಹಾಗೂ ಉದ್ಯೋಗಗಳ ಸಮನ್ವಯತೆ ಎಲ್ಲರಿಗೂ ದೊರಕುವಂತೆ ಮಾಡುವ ಹೊಸ ವಿಧಾನಗಳು ಇತ್ಯಾದಿ.

ಇವೆಲ್ಲ ದೃಷ್ಟಿಕೋನಗಳಿಂದ ಪ್ರಾದೇಶಿಕ ಯೋಜನೆ ಮಾಡುವಲ್ಲಿ ಕೆಳಗಿನಂತೆ ವಿಭಾಗಗಳನ್ನು ಮಾಡಬಹುದು.


೧ ಮಹಾನಗರ ಪ್ರದೇಶಗಳು
(Metropolitan or City regions)


೨ ನದೀಕೊಳ್ಳ ಪ್ರದೇಶಗಳು (River-Valley regions)

೩ ಪ್ರಮುಖ ಅಂಶೀಯ—ನೀರಾವರಿ, ಸಾರಿಗೆ ಇತ್ಯಾದಿ
(Axial development regions)

೪ ಹಿಂದುಳಿದ ಪ್ರದೇಶಗಳು
(Backward or depressed regions)

ಅಂತರ ರಾಜ್ಯ, ರಾಜ್ಯ, ಜಿಲ್ಲೆ, ಸ್ಥಳೀಯ ಕ್ಷೇತ್ರಗಳ ಪ್ರಮಾಣದಲ್ಲಿ ಸಹ ಪ್ರದೇಶಗಳನ್ನು ಗುರುತಿಸಬಹುದು.


ಪ್ರಾದೇಶಿಕ ಘಟಕಗಳು
(Regional Units)
ಸಮ ಅಂಶೀಯ
(Homogenous)
ಪ್ರಧಾನ ಅಂಶ
(Nodal)
ವಿಶಿಷ್ಟ
(Ad-Hoc)
ಸಂಧಿಕಾಲ ಪ್ರದೇಶ
(Transitional)
ಹಿಂದುಳಿದ
(Depressed Zones)
ನದೀ ಕೊಳ್ಳ
(River Valleys)
ಮಹಾನಗರ
(Metropolitan)
ಪ್ರಮುಖ ಅಂಶ
(Axial)


ಏಕ ಅಂಶ
(Single feature)
ವಿವಿಧ ಅಂಶೀಯ
(Multi feature)
ಸಮಗ್ರ
(Compage)
ಸಂಪನ್ಮೂಲ ಅಭಿವೃದ್ಧಿ
(Resource Planning regions)
ಇತರ
(Others)
ನೈಸರ್ಗಿಕ
(Natural)
ಆರ್ಥಿಕ
(Economic)
ಸಾಂಸ್ಕೃತಿಕ
(Cultural)
ಇತರ
(Others)

ನಿಶ್ಚಿತವಾಗಿ ಹೇಳುವುದಾದರೆ ಪ್ರದೇಶದ ಯೋಜನೆ ಮಾಡುವದೆಂದರೆ ಉದ್ದೇಶಿತ ಹಾಗೂ ಕ್ರಿಯಾತ್ಮಕವಾಗಿ ಚಟುವಟಿಕೆಯುಳ್ಳದ್ದಾಗುವಂತೆ ಮಾಡುವಲ್ಲಿ, ಭೌಗೋಲಿಕ ದೃಷ್ಟಿ ಯಿಂದ ನಿರ್ಣಯಿಸಿದ ಕ್ಷೇತ್ರವಾಗಿದ್ದು ಅದು ಒಳ್ಳೇ ಅನುಕೂಲಕರ ವಾದ ಗಾತ್ರ ಹಾಗೂ ಪ್ರಮಾಣವುಳ್ಳದ್ದು, ನಿರ್ಣಯಾತ್ಮಕ ರೂಪದ ಗಡಿಗಳನ್ನು ಗುರುತಿಸಿದ್ದಾಗಿರುತ್ತದೆ. ಆಡಳಿತಾತ್ಮಕ ವಾಗಿ ಸುಗಮ ಹಾಗೂ ಅನುಕೂಲಕರವಾಗಿದ್ದು, ರಾಜಕೀಯ, ಹಾಗೂ ಸಾಂಸ್ಕೃತಿಕವಾಗಿ ಒಪ್ಪಿಗೆಯಾಗುವಂತೆ, ಆರ್ಥಿಕವಾಗಿ ಲಾಭದಾಯಕವಾಗುವಂತೆ, ಸಂಪನ್ಮೂಲಗಳನ್ನು ಪ್ರಾದೇಶಿಕ ರಾಷ್ಟ್ರೀಯ, ಸ್ಥಳೀಯ ಚೌಕಟ್ಟಿನ ಧ್ಯೇಯ ಧೋರಣೆಗೆ ಅನುಗುಣವಾಗುವಂತೆ ಅಭಿವೃದ್ಧಿ ಪಡಿಸುವ ಘಟಕವಾಗಿದ್ದು, ಇಡೀ ವ್ಯವಸ್ಥೆಯಲ್ಲಿ ಸುವ್ಯವಸ್ಥಿತವಾಗಿ ಅಭಿವೃದ್ಧಿ ಹೊಂದಬೇಕಾದ ಪರಸ್ಪರ ಆಧಾರಿತ ಘಟಕವಾಗಿದ್ದು, ಇಲ್ಲಿ ಪ್ರದೇಶದ ಸಮಗ್ರ ಅಭಿವೃದ್ಧಿ ಹಾಗೂ ಜನಕಲ್ಯಾಣಗಳನ್ನು ಉಂಟುಮಾಡಿ ಗುರಿ ಸಾಧಿಸುವಲ್ಲಿ ಯೋಜನೆಯು ಒಂದು ಉಪಕರಣ ಸಾಧನವಾಗಿದೆ ಎಂದು ಹೇಳಬಹುದು.

ಪ್ರಾದೇಶಿಕ ಯೋಜನೆಯು ಭೌಗೋಲಿಕ ಹಾಗು ನಿಸರ್ಗದತ್ತ ಭಿನ್ನ ಹಾಗೂ ವೈಶಿಷ್ಟ್ಯಪೂರ್ಣ ಗಣನೆಗೆ ತೆಗೆದುಕೊಂಡು ಅನು- ಗುಣವಾಗಿ ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸಬೇಕೇ ಹೊರತು ಸಾಂಸ್ಕೃತಿಕ ಪ್ರತ್ಯೇಕತೆಯನ್ನು ರೂಪಿಸುವಂತಾಗಬಾರದು ಪ್ರಾದೇಶಿಕ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಒಳಗೊಂಡಾಗ್ಯೂ ರಾಷ್ಟ್ರೀಯ ಭಾವೈಕ್ಯತೆಯನ್ನು ಪ್ರೇರೇಪಿಸುವಂತಾಗಬೇಕು

ಜಾತೀಯತೆ, ಪ್ರಾಂತೀಯತೆ, ಭಾಷಾ ದುರಭಿಮಾನ ಮುಂತಾದ ಸಂಕುಚಿತತೆಗಳನ್ನು ತೊರೆದು ರಾಷ್ಟ್ರೀಯ ಮನೋವೃತ್ತಿಯಿಂದ "ಅನೇಕತಾ ಮೆ ಏಕತಾ" ಭಿನ್ನತೆಯಲ್ಲಿ ಏಕತೆಯನ್ನು ರೂಪಿಸಿ, ಸುಭದ್ರ ರಾಷ್ಟ್ರ ನಿರ್ಮಿಸುವಂತಾಗಬೇಕು.


ಪ್ರಾದೇಶಿಕ ಯೋಜನೆ ಮತ್ತು ನಗರ ಯೋಜನೆಯ ಸಂಬಂಧ :

ಯಾವದೇ ದೃಷ್ಟಿಕೋನದಿಂದ ಒಂದು ಪ್ರದೇಶದ ವ್ಯಾಖ್ಯೆಯನ್ನು ಮಾಡಿದರೂ, ಆ ಪ್ರದೇಶದಲ್ಲಿ ಸಾಮಾನ್ಯವಾಗಿ ಎಷ್ಟೋ ಹಳ್ಳಿಗಳು ಹಾಗು ನಗರಗಳು ಇರುತ್ತವೆ. ಒಟ್ಟು ಪ್ರದೇಶದ ಸಮತೋಲನದ ಬೆಳವಣಿಗೆಯಾಗಬೇಕಾದರೆ, ಹಳ್ಳಿಗಳನ್ನು ಹಾಗೂ ನಗರಗಳನ್ನು, ಪ್ರದೇಶದ ಬೆಳವಣಿಗೆಯ ಕೇಂದ್ರಗಳನ್ನಾಗಿ ಮಾಡಿ, ಸಮತೋಲದ ಬೆಳವಣಿಗೆ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ವಲಸೆ, ನಿರುದ್ಯೋಗ ಹಾಗೂ ಮಹಾನಗರಗಳ ಮೇಲೆ ಮಿತಿಮೀರಿದ ಒತ್ತಡವನ್ನು ಉಂಟುಮಾಡುತ್ತದೆ. ವಾಲ್ಟರ್ ಕ್ರಿಸ್ಟಲರ್ ಅವರು, ಜರ್ಮನಿಯಲ್ಲಿ ಅಭ್ಯಾಸ ಮಾಡಿ ಪ್ರದೇಶದಲ್ಲಿ ಹಳ್ಳಿ ಮತ್ತು ಪಟ್ಟಣಗಳು ಯಾವ ಸ್ವರೂಪದಲ್ಲಿ ಹಾಗೂ ವಿಸ್ತೀರ್ಣದಲ್ಲಿ ಹೇಗೆ ಬೆಳವಣಿಗೆ ಆಗಬೇಕೆಂಬ ಬಗ್ಗೆ, ಕೇಂದ್ರ ಹಾಗೂ ಜನಸಂಖ್ಯೆ ಆಧಾರದ ಮೇಲೆ ಒಂದು ರೂಪರೇಷೆಯನ್ನು ಅಂದರೆ ಕ್ರಿಸ್ಟಲರರ "ಮಧ್ಯ ಕೇಂದ್ರ ನಿರ್ದೇಶನ ಸಿದ್ಧಾಂತ" ನಿರೂಪಿಸಿದ್ದಾರೆ. ಭಾರತದಲ್ಲಿಯೂ ಸಹ ಇಂಥ ಒಂದು ಮೂಲಭೂತ ರೂಪರೇಷೆಯ ಅಭ್ಯಾಸದ ಅವಶ್ಯಕತೆ ಇದೆ ಎಂದು

ಹೇಳಬಹುದು. ಪ್ರಾದೇಶಿಕ ಅಭಿವೃದ್ಧಿಯನ್ನು ಉಂಟುಮಾಡು ಪೂರ್ವದಲ್ಲಿ, ಪ್ರದೇಶದ ಸರಿಯಾದ ಭೂ ಉಪಯೋಗದ ಬ ಒಕ್ಕಲುತನ, ಅರಣ್ಯಗಳು, ಹಳ್ಳಿ–ನಗರಗಳ ಸ್ಥಳ ನಿರ್ದೇಶ ಜಲಾಶಯುಗಳು ಇತ್ಯಾದಿಗಳ ಬಗ್ಗೆ ಯೋಜಿಸಿ, ಪ್ರಾದೇಶಿ ಅಭಿವೃದ್ಧಿಯು ಔದ್ಯೋಗಿಕ ಹಾಗೂ ಸಾಮಾಜಿಕ, ಆರ್ಥಿಕ ರ ಗಳಲ್ಲಿ ಅಭಿವೃದ್ಧಿಯಾಗುವಂತೆ ಪ್ರಯತ್ನಿಸಬೇಕಾಗುತ್ತ ಅದಕ್ಕಾಗಿ ಸ್ಥಳೀಯ ಹಳ್ಳಿಗಳಲ್ಲಿಯ ಪಂಚಾಯಿತಿ, ನಗರಗಳ ನಗರಪಾಲಿಕೆಗಳ ಮುಖಾಂತರ ಪ್ರಾದೇಶಿಕ ಯೋಜನೆ ಮಾರ್ಗದರ್ಶನದಂತೆ, ಅವುಗಳ ಕಾರ್ಯಕ್ರಮಗಳು ಕಾರ್ಯಾ ಚರಣೆಯಲ್ಲಿ ಬರುವಂತೆ ಪ್ರಯತ್ನಿಸಬೇಕು. ಇಂಥ ಸಂದರ್ಭಗಳ ಅವುಗಳ ಪರಸ್ಪರ ಸಂಬಂಧದ ಹೊಂದಾಣಿಕೆಯ ಅವಶ್ಯಕ ಒಟ್ಟು ಪರಿಣಾಮ ನಿರ್ಮಿಸುವಲ್ಲಿ ಅವಶ್ಯವಾಗಿದೆ.

ಭಾರತದಲ್ಲಿ :

ಭಾರತದಲ್ಲಿ ಪ್ರಾದೇಶಿಕ ಯೋಜನೆಯನ್ನು ಮಾಡುವಾ ಪ್ರದೇಶಗಳನ್ನು ಗುರುತಿಸುವಾಗ ಎರಡು ಬಗೆಯಿಂದ ಮಾ ಬಹುದಾಗಿದೆ. (೧) ಮಹಾನಗರ ಹಾಗೂ ಅದರ ಸುತ್ತಲಿ ಪ್ರದೇಶ ಮತ್ತು (೨) ಆರ್ಥಿಕ ಪ್ರದೇಶಗಳು. ಉದಾ : ರಾಜ್ಯಗ ಮಟ್ಟದಲ್ಲಿ ದಕ್ಷಿಣ, ಪಶ್ಚಿಮ, ಪೂರ್ವ, ಉತ್ತರ–ಪಶ್ಚಿ ಉತ್ತರ–ಮಧ್ಯ ಪ್ರದೇಶಗಳು ಇತ್ಯಾದಿ. (ಚಿತ್ರ–೧).



ಭಾರತದಲ್ಲಿ ಪ್ರಾದೇಶಿಕ ಯೋಜನೆಯ ಸಮಸ್ಯೆಗಳನ್ನು ಅಭ್ಯಸಿಸುವಾಗ ವಿಶೇಷವಾಗಿ ಕೆಳಗಿನ ಪ್ರಮೇಯಗಳನ್ನು ಉಪಯೋಗಿಸಿ ವಿಶ್ಲೇಷಣೆ ಮಾಡಬಹುದಾಗಿದೆ.

೧ ಪ್ರಾದೇಶಿಕ ಜನಸಂಖ್ಯೆ ಹಾಗೂ ವಲಸೆಯ ಅಂದಾಜು

೨ ಪ್ರಾದೇಶಿಕ ಸಮಾಜದ ಆದಾಯದ ಅಂದಾಜು ಮತ್ತು ಸಾಮಾಜಿಕ ಪರಿಸ್ಥಿತಿಯ ಪರಿಶೀಲನೆ.

೩ ಅಂತರ ಪ್ರಾದೇಶಿಕ ಸಮಾಗಮ ವಾಣಿಜ್ಯ ಪರಿಸ್ಥಿತಿ ಮತ್ತು ಆರ್ಥಿಕ ಭದ್ರತೆಯ ಸಮೀಕ್ಷೆ.

೪ ಪ್ರದೇಶದ ಹಾಗೂ ಅಂತರ ಪ್ರದೇಶಗಳ ಪರಸ್ಪರ ಸಂಬಂಧ.

೫ ಉದ್ದಿಮೆಗಳ ಸ್ಥಾಪನೆಗೆ ಅನುಕೂಲಮಾಡುವ ಹಾಗೂ ಸಂಬಂಧಿಸಿದ ವಿಷಯುಗಳ ಸಂಗತಿಗಳ ವಿಚಕ್ಷಣೆ.

೬ ಪ್ರಾದೇಶಿಕ ಹಾಗೂ ಅಂತರ ಪ್ರದೇಶಗಳ ಆರ್ಥಿಕ ಬೆಳವಣಿಗೆಯ ಸೂಚಕ ಹಾಗು ಸಾಂಪತ್ತಿಕ ಸಾಮರ್ಥ್ಯ.

೭ ಉದ್ದಿಮೆಯ ವೈಶಿಷ್ಟ್ಯಗಳ ಅಭ್ಯಾಸ.

೮ ಅಂತರ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಸಹಾಯಕವಾಗಬಲ್ಲ ಧ್ಯೇಯ ಧೋರಣೆಗಳು.

೯ ಭಾರತೀಯ ಪರಿಸ್ಥಿತಿಗೆ ಅನುಗುಣವಾಗಿ ಹೊಂದಾಣಿಕೆಯಾಗಬಲ್ಲ; ಸಾಮಾಜಿಕ, ಆರ್ಥಿಕ, ಸಮಗ್ರ ದೃಷ್ಟಿಕೋನದಿಂದ ರೂಪಿತವಾದ ಪ್ರಾದೇಶಿಕ ಅಭಿವೃದ್ಧಿ ಮಾದರಿಯ ಹಾಗೂ ಅಂತರ ಪ್ರಾದೇಶಿಕ ಸಾರಿಗೆಯ ಸಾಮರ್ಥ್ಯ.

ಅನುಭವಗಳು

೧. ಟೆನಸ್ಸೀ ನದೀಕೊಳ್ಳ ಯೋಜನೆ :


ಅಮೇರಿಕೆಯಲ್ಲಿ ಟೆನಸ್ಸೀ ನದೀಕೊಳ್ಳ ಪ್ರದೇಶವು ಏಳು ರಾಜ್ಯಗಳಲ್ಲಿ ಹರಡಿದ್ದು, ಹಿಂದೊಮ್ಮೆ ಅದು ಕಡಿಮೆ ಆದಾಯ ಮಟ್ಟ ಹಾಗೂ ಜೀವನಮಟ್ಟ, ವಲಸೆ, ಮಣ್ಣಿನ ಸವಕಳಿ, ನೆರೆಹಾವಳಿಗಳಿಂದ ಸಮಸ್ಯೆಯಾತ್ಮಕ ಹಿಂದುಳಿದ ಪ್ರದೇಶವಾಗಿತ್ತು. ಅಮೇರಿಕೆಯ ಕೇಂದ್ರ ಸರಕಾರವು ಒಂದು ಯೋಜನೆ ಮಾಡಿ, ಅದರ ಉಪನದಿಗಳಿಗೆ ಆಣೆಕಟ್ಟುಗಳನ್ನು ಕಟ್ಟಿ ಹಾಗು ಒಕ್ಕಲುತನ, ವಿದ್ಯುಚ್ಛಕ್ತಿ ಯೋಜನೆ, ಉದ್ದಿಮೆಗಳನ್ನು ಆರಂಭಿಸಿ, ಒಂದು ವಿವಿಧೋದ್ದೇಶಗಳ ಯೋಜನೆ ಅಂದರೆ ತಾರ್ಕಿಕವಾಗಿ ಅನೇಕ ರಾಜ್ಯಗಳುಳ್ಳ ಒಂದು ರಾಷ್ಟ್ರೀಯ ಮಟ್ಟದ ಪ್ರಾದೇಶಿಕ ಯೋಜನೆಯನ್ನು ಮಾಡಿ ಅದರ ಅಭಿವೃದ್ಧಿಗೆ ಕಾರಣವಾಗಿದೆ. ನೀರಾವರಿಯ ಸದುಪಯೋಗ ಹಾಗೂ ನೆರೆಹಾವಳಿ

ಪ್ರಮುಖವಾಗಿ ನಿಯಂತ್ರಿತವಾಗಿದೆ. ಈ ಯೋಜನಾ ಅಭಿವೃದ್ಧಿ ಮಂಡಲಿ ರಚಿಸಿ, ಅದಕ್ಕೆ ಕಾಯ್ದೆಯ ಬೆಂಬಲ ನೀಡಿ ಸುಗಮವಾದ ಕಾರ್ಯಾಚರಣೆ ಆಗುವಂತೆ ಮಾಡಿದೆ. ಗುತ್ತಿಗೆಗೆ ಕೊಡದೆ ಮಂಡಲಿಯೇ ತಾನೇ ಪಾತ್ರವಹಿಸಿ ಯೋಜನೆಯ ಕಾರ್ಯಗಳನ್ನು ನಿರ್ಮಿಸಿದೆ. ಇದೊಂದು ಪ್ರಜಾಸತ್ತಾತ್ಮಕ ಯೋಜನೆಯಲ್ಲಿ ಅತ್ಯಂತ ಯಶಸ್ವಿಯಾದ ಯೋಜನೆ ಆಗಿ, ಸರಕಾರ, ಅನೇಕ ಸಂಸ್ಥೆಗಳು ಕೂಡಿ, ಮಲೇರಿಯಾ ನಿಯಂತ್ರಣ, ಒಕ್ಕಲುತನದ ಫಾರ್ಮಗಳು, ಹಳ್ಳಿಗಳ ನಿರ್ಮಾಣ, ಗೊಬ್ಬರ ತಯಾರಿಕೆ, ವಿದ್ಯುಚ್ಛಕ್ತಿ, ಶಾಲೆ, ಕಾಲೇಜು, ಸಾಮಾಜಿಕ ಹಾಗೂ ಆರ್ಥಿಕ ಯೋಜನೆಗಳಿಂದ ಸಮಗ್ರ ನದೀಕೊಳ್ಳ ಪ್ರದೇಶದ ಅಭಿವೃದ್ಧಿ ಸಾಧಿಸಿದ ಜಾಗತಿಕ ಮಾದರಿ ಶ್ಲಾಘನೀಯವಾಗಿದೆ. ಜಾನ್ ಡೆವಿಯು (John Dewey) ಹೇಳುವಂತೆ ಇದು ಯೋಜಿತ ಪ್ರದೇಶವಾಗಿರದೆ, ಪ್ರಾದೇಶಿಕ ಯೋಜನೆ ಮಾಡುವದಾಗಿದೆ.

೨. ದಾಮೋದರ ನದೀ ಕೊಳ್ಳ ಯೋಜನೆ :

ದಾಮೋದರ ನದೀಕೊಳ್ಳ ಯೋಜನೆ

(ಚಿತ್ರ ೨)



ಪ್ರವಾಹಗಳು ಬಂದಾಗ ಜನರಿಗೆ ನೆರವು ನೀಡಲು ಶಿಬಿರ ಗಳನ್ನು ಏರ್ಪಡಿಸುವದು ಅಗತ್ಯ. ಆದರೆ ಇದಕ್ಕಿಂತ ಮುಖ್ಯ ವಾದ ಕಾರ್ಯ ಪ್ರವಾಹಗಳನ್ನು ಹತೋಟಿಯಲ್ಲಿಡುವದು ದಾಮೋದರ ನದಿಗೆ ಮೇಲಿಂದ ಮೇಲೆ ಪ್ರವಾಹ ಬಂದು ಜನ ಜೀವನ ಅಲ್ಲೋಲ ಕಲ್ಲೋಲವಾಗುತ್ತಿತ್ತು. ಆಗ ಸರಕಾರವು ಈ ಪ್ರವಾಹಗಳಿಗೆ ಬಂದು ಶಾಶ್ವತ ಪರಿಹಾರವನ್ನು ಹುಡುಕಲು ವಿಚಾರಣಾ ಸಮಿತಿಯೊಂದನ್ನು ರಚಿಸಿತು. ದಾಮೋದರ ನದಿ ಮತ್ತು ಅದರ ಉಪನದಿಗಳಿಗೆ ಅಲ್ಲಲ್ಲಿ ಅಣೆಕಟ್ಟನ್ನು ಹಾಕಿ ಪ್ರವಾಹವನ್ನು ನಿಯಂತ್ರಿಸಬೇಕು. ಆಗ ಬೆಟ್ಟ ಪ್ರದೇಶಗಳಲ್ಲಿ ಸಂಗ್ರಹವಾದ ನೀರು ಜಲಾಶಯಗಳಾಗಿ ಮೈದಾನ ಪ್ರದೇಶಗಳಲ್ಲಿ ಪ್ರವಾಹದ ಪ್ರಭಾವವು ಕಡಿಮೆಯಾಗುವದು. ಈ ಜಲಾಶಯ ಗಳಲ್ಲಿನ ನೀರನ್ನು ವರ್ಷವಿಡೀ ಕೃಷಿಗಾಗಿ ಬಳಸಬಹುದಲ್ಲದೆ ಜಲವಿದ್ಯುತ್ಾಗರಗಳನ್ನೂ ರೂಪಿಸಬಹುದು. ಹೀಗೆ ಅಮೇರಿಕದ ಟೆನಸ್ಸೀ ಕಣಿವೆ ಯೋಜನೆಯ ಮಾದರಿಯಲ್ಲಿ ಡಾ. ಮೇಘನಾಥ ಸಹಾ; ನ್ಯೂಕ್ಲಿಯರ" ಭೌತ ವಿಜ್ಞಾನದ ಸಂಶೋಧನೆಯಲ್ಲಿ ಅಂತರ್‌ರಾಷ್ಟ್ರೀಯ ಖ್ಯಾತಿ ಪಡೆದ ವಿಜ್ಞಾನಿ ಹಾಗೂ 'ಕಷ್ಟಪಟ್ಟು ಓದುವದೇ ಸರಸ್ವತಿಯ ಪೂಜೆ' ಎಂದು ನಂಬಿದ ವಿಜ್ಞಾನಿ ದಾಮೋದರ ಕಣಿವೆಯೋಜನೆ ತಯಾರಿಸಿದರು, ಸರ್ಕಾರ ಇದನ್ನು ಒಪ್ಪಿ ಕೆಲಸ ಪ್ರಾರಂಭಿಸಿತು.

ಈ ದಾಮೋದರ ನದೀಕೊಳ್ಳ ಯೋಜನಾ ಪ್ರದೇಶವು ಬಿಹಾರ ಮತ್ತು ಪಶ್ಚಿಮ ಬಂಗಾಲದಲ್ಲಿ ಹರಡಿದೆ. ಇದು ಅನೇಕ ಖನಿಜಗಳ ಆಗರವಾಗಿದ್ದು, ನೀರಾವರಿಯ ನಂತರ ಗ

ಉದ್ಯಮವು ಮಹತ್ವದ ಅಂಶವಾಗಿದೆ. ಕಬ್ಬಿಣ, ತಾಮ್ರ, ಸುಣ್ಣದ ಹರಳು, ಕಲ್ಲಿದ್ದಲು, ಗ್ರಾಫಾಯಿಟ್, ಮ್ಯಾಂಗನೀಸ್ ಮುಂತಾದ ಅದಿರುಗಳು ಲಭ್ಯವಿರುವದರಿಂದ ಅನೇಕ ಉದ್ದಿಮೆಗಳು ಇಲ್ಲಿ ಬೆಳೆದು ನಿಂತಿವೆ. ಉದಾಹರಣೆಗೆ: ಚಿತ್ತರಂಜನದ ರೇಲ್ವೆ ಉದ್ದಿಮೆ, ಅಲ್ಯುಮಿನಿಯಂ ಫ್ಯಾಕ್ಟರಿ ಮುರಿ, ಸಿಂದ್ರಿಯ ಗೊಬ್ಬರ ಕಾರಖಾನೆ, ಆಸನಸೋಲದ ಗಾಜಿನ ಕಾರಖಾನೆ, ಧಕ್ಕಾದ ರಾಸಾಯನಿಕ ಕಾರಖಾನೆ ಇವುಗಳನ್ನು ಹೆಸರಿಸಬಹುದು.

ಒಟ್ಟಿನಲ್ಲಿ ದಟ್ಟ ಸಾಂದ್ರತೆಯ ಜನವಸತಿ, ಶಹರಗಳಲ್ಲಿ ಹರಡಿದ ಉದ್ದಿಮೆಗಳು, ಸಣ್ಣ ಹಾಗೂ ಗೃಹಕೈಗಾರಿಕೆಗಳು, ಗಣಿ ಉದ್ದಿಮೆಗಳು, ಈ ಪ್ರದೇಶದ ವೈಶಿಷ್ಟ್ಯಗಳೆಂದು ಹೇಳಬಹುದು. ಸರಕಾರದಿಂದ ಸಾರ್ವಜನಿಕ ರಂಗದಲ್ಲಿ ನಿರ್ಮಿತವಾದ ಮಹತ್ವದ ಉದ್ದಿಮೆಗಳು—ಉಕ್ಕು ರಾಸಾಯನಿಕ ಕಾರಖಾನೆ ಬೊಕ್ಯಾರೋ, ಹೇವಿ ಮಶಿನ್ ಟೂಲ್ಸ ಕಾರಖಾನೆ ರಾಂಚಿ, ಭಾರತೀಯ ಸ್ಫೋಟಕಗಳ ಕಾರಖಾನೆ ಹಜಾರಿಭಾಗಗಳು ಇವೆ. (ಚಿತ್ರ–೨).



ಚಿತ್ರ 3

ಬೆಂಗಳೂರ ಬೃಹತ್ ನಗರ ಯೋಜನೆ :
Bangalore Metropolitan Planning

ಬೆಂಗಳೂರ ಬೃಹತ್ ನಗರ ಯೋಜನೆ ಮಾಡುವ ಸಲುವಾಗಿ, ಕರ್ನಾಟಕ ಸರಕಾರವು ಪ್ರಾದೇಶಿಕ ಯೋಜನಾ ಕ್ಷೇತ್ರವನ್ನು ನಿರ್ದೇಶಿಸಿ, ಮೈಸೂರ ನಗರ ಮತ್ತು ಗ್ರಾಮಾಂತರ ಕಾಯ್ದೆ ೧೯೭೧ ರ ಆಧಾರದ ಮೇಲೆ ಯೋಜನೆಯನ್ನು ತಯಾರಿಸಿತು. ಇದು ಸುಮಾರು ೧೯೩ ಚೌರಸ ಮೈಲು ಕ್ಷೇತ್ರವನ್ನು ಒಳಗೊಂಡಿದೆ. ಮತ್ತು ೧೯೮೧ ರ ಜನಗಣತಿಯ ಆಧಾರದ ಮೇಲೆ ೨೪.೭೬ ಲಕ್ಷ ಜನಸಂಖ್ಯೆ ಇದೆ. ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡವನ್ನು ಅನುಲಕ್ಷಿಸಿ, ವರ್ತುಲಾಕಾರದಲ್ಲಿ ಯೋಜನೆಯನ್ನು ರೂಪಿಸಿ. ಬೃಹತ್‌ನಗರಗಳ ಪ್ರಮುಖ ಸಮಸ್ಯೆಗಳಲ್ಲಿ ಒಂದಾದ ಸಾರಿಗೆ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಿದೆ. ಕಾಲಮಿತಿಯಲ್ಲಿ ಬೆಳೆದು ಬಂದ ಬಗೆಯನ್ನು ಚಿತ್ರದಲ್ಲಿ ಹಂತಹಂತವಾಗಿ ನಿರೂಪಿಸಿದೆ. ಭಾರತದ ಮಹತ್ವದ ಬೃಹತ್ ನಗರಗಳಲ್ಲಿ ಒಂದಾದ ಬೆಂಗಳೂರ, ತನ್ನದೇ ಆದ ಅಭಿವೃದ್ಧಿ ಯೋಜನೆಯನ್ನು ಹೊಂದಿದ್ದು, ಬೆಂಗಳೂರ ಅಭಿವೃದ್ಧಿ ಪ್ರಾಧಿಕಾರವು ಅದನ್ನು ಕಾರ್ಯಾಚರಣೆಯಲ್ಲಿ ಸುವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಿದೆ. (ಚಿತ್ರ–೩).

ಕರ್ನಾಟಕ ರಾಜ್ಯದ ಪ್ರಾದೇಶಿಕ ಯೋಜನಾ ಪ್ರಯತ್ನ ಸಮೀಕ್ಷೆ :

ಕರ್ನಾಟಕ ಸರಕಾರವು ತನ್ನ ನಗರ ಯೋಜನಾ ಇಲಾಖೆಯ ಮುಖ್ಯ ಕಾರ್ಯಕ್ರಮಗಳಲ್ಲಿ, ರಾಜಧಾನಿ ಮತ್ತು ನದಿ ಕಣಿವೆ

ಪ್ರದೇಶಗಳ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವದನ್ನು ಒಂದು ಎಂದು ಪರಿಗಣಿಸಿದೆ. ಈ ದಿಶೆಯಲ್ಲಿ ಬೆಂಗಳೂರ ಬೃಹತ್ ನಗರ ಯೋಜನೆ, ಮೈಸೂರ ಬೃಹತ್ ನಗರ ಯೋಜನೆ, ದಾಂಡೇಲಿ ಪ್ರದೇಶ ಯೋಜನೆ, ಕಾವೇರಿ ನದಿಕೊಳ್ಳ ಯೋಜನೆ. ಪಶ್ಚಿಮ ಘಟ್ಟ ಯೋಜನೆ, ಕೃಷ್ಣಾ ತುಂಗಭದ್ರಾ ನದಿಕೊಳ್ಳ ಯೋಜನೆಗಳನ್ನು ಹೆಸರಿಸಬಹುದು.

ಪ್ರದೇಶಗಳ ಸಮಗ್ರ ,ಅಭಿವೃದ್ಧಿಗಾಗಿ ಒಂದು ಭೌಗೋಲಿಕ, ಸಾಂಪತ್ತಿಕ, ಸಾಮಾಜಿಕ ದೃಷ್ಟಿಕೋನಗಳ ಹೊಂದಾಣಿಕೆಯುಳ್ಳ ಒಂದು ನಿಶ್ಚಿತ ಧೋರಣೆಗೆ ಅನುಗುಣವಾಗಿ ಯೋಜನೆ ರೂಪಿಸುವದು ಹೆಚ್ಚು ಸೂಕ್ತ, ಹಾಗು ಇದು ಒಂದು ಯೋಜನಾ ತತ್ವವಾಗಿ ಕಾರ್ಯರೂಪಕ್ಕೆ ಬಂದರೆ ಹೆಚ್ಚು ಸೂಕ್ತವಾಗುತ್ತದೆ.

ಶಿಕ್ಷಣ ಸಂಸ್ಥೆಗಳು ಮತ್ತು ಪರಿಣಿತರು :

ಭಾರತದಲ್ಲಿ ಪ್ರಾದೇಶಿಕ ಯೋಜನಾ ಶಾಸ್ತ್ರವನ್ನು ವೈಜ್ಞಾನಿಕ ತತ್ವಗಳ ಆಧಾರದ ಮೇಲೆ ಅಭ್ಯಸಿಸುವ ಪ್ರಮುಖ ವಿದ್ಯಾ ಸಂಸ್ಥೆಗಳಲ್ಲಿ; ಆಯ್.ಆಯ್.ಟಿ. ಖರಗಪೂರ, ದೆಹಲಿ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ ಮೈಸೂರ ವಿಶ್ವವಿದ್ಯಾಲಯ, ನಗರ ಮತ್ತು ಗ್ರಾಮಗಳ ಯೋಜನಾ ಸಂಸ್ಥೆ ನ್ಯೂ ದೆಹಲಿ. ಭಾರತೀಯ ಸಂಖ್ಯಾ ಸಂಸ್ಥೆ ನ್ಯೂ ದೆಹಲಿ, ಅರ್ಥಿಕ ಬೆಳವಣಿಗೆ ಸಂಸ್ಥೆ ದೆಹಲಿ, ಭಾರತೀಯ ನಕ್ಷಾ ಸಂಸ್ಥೆ ಕಲಕತ್ತಾ. ಸಮಾಜ ಅಭಿವೃದ್ಧಿ ಸಂಸ್ಥೆ ಹೈದರಾಬಾದ ಇವುಗಳನ್ನು ಹೆಸರಿಸಬಹುದು.

ಶ್ರೀ ಮನಮೋಹನಸಿಂಗ, ಶ್ರೀ ಜಿ.ವ್ಹಿ.ಕೆ. ರಾವ, ಶ್ರೀ ವ್ಹಿ. ಕೆ. ಆರ್. ವ್ಹಿ. ರಾವ್, ಶ್ರೀ ಸಿ. ಡಿ. ದೇಶಪಾಂಡೆ, ಶ್ರೀ ಕೆ. ಎಸ್. ರಾಮೇಗೌಡ, ಶ್ರೀ ಎಲ್.ಎಸ್. ಭಟ್ಟ, ಶ್ರೀ ಶ್ರೀ ಡಿ.ಆರ್. ಗಾಡಗೀಳ, ಶ್ರೀ ಆರ್.ಪಿ. ಮಿಶ್ರ, ಶ್ರೀ ವ್ಹಿ.ಎಲ್. ಎಸ್. ಪ್ರಕಾಶರಾವ, ಶ್ರೀ ಸಿ. ಆರ್. ಪಾಠಕ, ಶ್ರೀ ಕೆ. ವ್ಹಿ. ಸುಂದರವ್, ಶ್ರೀ ಸತೀಶ ಚಕ್ರವರ್ತಿ, ಶ್ರೀ ಎಮ್.ಎಫ್. ಕರೆಣ್ಣವರ, ಶ್ರೀ ಸಿ. ಚಂದ್ರಶೇಖರ ಮತ್ತು ಶ್ರೀ ಡಿ.ಎಂ. ನಂಜುಂಡಪ್ಪ ಮುಂತಾದ ಭಾರತೀಯ ಪ್ರಾದೇಶಿಕ ಯೋಜನಾಕಾರರನ್ನು ಹೆಸರಿಸಬಹುದು.

BIBLIOGRAPHY

1 Gupta R. G. (1983)
'Planning and development of Towns'
Oxford and IBH Publishing Co. New-Delhi

2 Isard Walter (1969)
'Methods of Regional Analysis : An Introduction to Regional Science.' The MIT Press

3 John Friedman and William Alonso,
(ED) 1967
'Regional development and planning'
The MIT Press

4 Keeble Lewis (1969)
'Principles and Practice of Town and Country planning'
The Estate Gazettee Ltd. London

5 Mishra R. P. (1969) (Edited)
'Regional Planning : Concept, techniques Policies and case studies'
Prasaranga-University of Mysore. Mysore

6 Modak N. V. and Ambedkar V. N. (1971)
'Town and Country planning and housing'
Orient Longaman, Ltd, Delhi.

7 Nanjundappa, D. M. (Edited) 1973
'Transport Planning and Finance'
Karnatak University, Dharwad

8 Prakash Rao V.L.S. (1963)
'Regional Planning'
Asia Publishing House

9 Prakash Rao & Tewari V. K, (1979)
'Structure of Indian Metropolis'
Applied Publisher Pvt. Ltd. Bombay

10 Ramegouda K. S. (1972)
'Urban and Regional Planning'
Prasaranga, University of Mysore, Mysore

11 Sundaram K. V. (1979)
"Urban and Regional Planning in India"
Vikas Publishing House Pvt. Ltd. New-Delhi

ಉಪನ್ಯಾಸ ಗ್ರಂಥಮಾಲೆಯ ಕೆಲವು ಪ್ರಕಟನೆಗಳು

೧ ಭಾರತದಲ್ಲಿ ತೆರಿಗೆ ಮತ್ತು ಕಪ್ಪುಹಣದ ಪಾತ್ರ

—ಎಸ್. ಎನ್. ನಾಯಕ

೨ ಗ್ರಾಮಾಂತರ ಪ್ರದೇಶದ ಮಾರುಕಟ್ಟೆಯ ಮಹತ್ವ

—ಎ. ಆರ್. ರೊಟ್ಟಿ

೩. ಭಾರತದಲ್ಲಿ ಸುಶಿಕ್ಷಿತ ನಿರುದ್ಯೋಗ ಸಮಸ್ಯೆ

— ಟಿ. ಸೋಮಶೇಖರ

೪ ಗ್ರಾಮೋದ್ಯೋಗಗಳ ಮಹತ್ವ

—ಪಿ. ಎ. ಭಟ್ಟ

೫ ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಪಾತ್ರ

—ಎ. ಎಂ. ಯರನಾಳ

೬. ಯೋಜನೆಗಳಿಂದ ಕಲಿತ ಪಾಠಗಳು

—ಡಿ. ವೆಂಕಟರಾವ್

೭ ಕೈಮಗ್ಗದ ಉದ್ದಿಮೆಯ ಅಭಿವೃದ್ಧಿ

—ವ್ಹಿ. ಬಿ. ಅಂಗಡಿ

೮ ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು

—ಟಿ. ಎಂ. ಪಂಡಿತ

೯ ಗ್ರಾಮಾಭ್ಯುದಯದ ಯೋಜನಾಂಗಗಳು

—ಟಿ. ಕೆ. ಮೇಟಿ

೧೦ ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ

—ಫಿ. ಎಂ. ಉಮಾಕಾಂತ ಶಾಸ್ತ್ರಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ